# ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

**ನಂ.16–ಡಿ, ದೇವರಾಜ ಅರಸು ಭವನ, 4ನೇ ಮಹಡಿ ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು–52**

* * *

## 2019–20ನೇ ಸಾಲಿನ ಆಯವ್ಯಯ

* * *

ರಾಜ್ಯ ಸರ್ಕಾರವು 2019–20ನೇ ಸಾಲಿನ ಆಯವ್ಯಯದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಒದಗಿಸಿದ ರೂ.25000.00ಲಕ್ಷಗಳು ಹಾಗೂ ಕಳೆದ ಸಾಲುಗಳ ಉಳಿಕೆ ಮೊತ್ತ ರೂ.3200.00ಲಕ್ಷಗಳು ಹೀಗೆ ಒಟ್ಟು ರೂ.28200.00ಲಕ್ಷಗಳಲ್ಲಿ **37276** ಹಿಂದುಳಿದ ವರ್ಗಗಳ ಜನರಿಗೆ ಸಾಲ ಮತ್ತು ಸಹಾಯಧನದ ಸೌಲಭ್ಯ ಒದಗಿಸಲು ಕ್ರಿಯಾ ಯೋಜನೆಯನ್ನು ರೂಪಿಸಿದೆ.

ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಒದಗಿಸಿದ ಲೆಕ್ಕ ಶೀರ್ಷಿಕೆವಾರು ಹಣದ ವಿವರ ಈ ಕೆಳಕಂಡಂತಿದೆ.

(ಲಕ್ಷ ರೂ.ಗಳಲ್ಲಿ)

| **ಕ್ರ. ಸಂ.** | **ಯೋಜನೆಯ ಹೆಸರು ಮತ್ತು ಲೆಕ್ಕ ಶೀರ್ಷಿಕೆ** | **ಆಯವ್ಯಯದಲ್ಲಿ ಒದಗಿಸಿರುವ ಹಣ** |
|---|---|---|
| **1** | **2** | **3** |
| **1** | ಷೇರು ಬಂಡವಾಳ/ ಸಾಲ ಯೋಜನೆಗಳ ಅನುಷ್ಠಾನಕ್ಕೆ (4225–03–190–0–01) | 5000.00 |
| **2** | ಸಹಾಯಧನ (2225–03–190–0–04) | 20000.00 |
| **3** | ಕಳೆದ ಸಾಲುಗಳ ಉಳಿಕೆ ಮೊತ್ತ | 3200.00 |
| | **ಒಟ್ಟು** | **28200.00** |

# 2019–20ನೇ ಸಾಲಿನ ಕ್ರಿಯಾ ಯೋಜನೆ

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ | ಯೋಜನೆ/ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಿರುವ ಮೊತ್ತ | ಕಾರ್ಯಕ್ರಮದ ಹೆಸರು | ನಿಗದಿಪಡಿಸಿದ ಗುರಿ | | | | ವಿಕಲಚೇತನರಿಗೆ (5%ರಷ್ಟು ಮೀಸಲು, ಇದರಲ್ಲಿ ಶೇ.2.5ರಷ್ಟು ಮಹಿಳಾ ವಿಕಲಚೇತನರಿಗೆ ಮೀಸಲು) | | ಮಹಿಳೆಯರು (33%ರಷ್ಟು ಮೀಸಲು) | |
|---|---|---|---|---|---|---|---|---|---|---|---|
| | | | | ಸಹಾಯ ಧನ | ಸಾಲ | ಒಟ್ಟು | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಷೇರು ಬಂಡವಾಳ 4225–03–190–0–01 | 5000.00 | 1. ಚೈತನ್ಯ ಸಹಾಯಧನ ಯೋಜನೆ | 500.00 | – | 500.00 | 2500 | 25.00 | 125 | 165.00 | 825 |
| | | | 2. ಡಿ.ದೇವರಾಜ ಅರಸು ಸ್ವಯಂ ಉದ್ಯೋಗ | 3000.00 | – | 3000.00 | 6000 | 150.00 | 300 | 990.00 | 1980 |
| | | | 3. ಕಿರುಸಾಲ | 500.00 | – | 500.00 | 3333 | 25.00 | 166 | 165.00 | 1100 |
| | | | **4. ಅರಿವು ಶೈಕ್ಷಣಿಕ ಸಾಲ**<br>a. ನವೀಕರಣ | – | 3450.00 | 3450.00 | 6900 | 172.50 | 345 | 1138.50 | 2277 |
| | | | b. ಸಿ.ಇ.ಟಿ.ಗೆ ಮುಂಗಡ ಠೇವಣಿ. | – | 700.00 | 700.00 | 1400 | 35.00 | 70 | 231.00 | 462 |
| | | | c. ಸಿ.ಇ.ಟಿ. ಮುಂಗಡ ಠೇವಣಿ ಹೊರತು ಪಡಿಸಿ. | – | 700.00 | 700.00 | 1400 | 35.00 | 70 | 231.00 | 462 |
| | | | d. ವಿದೇಶಿ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಬಡ್ಡಿ ರಹಿತ ಸಾಲ | – | 150.00 | 150.00 | 43 | 7.50 | 2 | 49.50 | 14 |
| | | | **ಅರಿವು ಒಟ್ಟು** | – | **5000.00** | **5000.00** | **9743** | **250.00** | **487** | **1650.00** | **3215** |

| 1 | 2 | 3 | 4 | 5 | 6 | 7 | 8 | 9 | 10 | 11 | 12 |
|---|---|---|---|---|---|---|---|---|---|---|---|
| 2 | ಸಹಾಯಧನ 2225–03–190–0–04 | 20000.00 | 1. ಸಾಂಪ್ರದಾಯಿಕ ವೃತ್ತಿದಾರರ ಸಾಲ | 2000.00 | – | 2000.00 | 4000 | 100.00 | 200 | 660.00 | 1320 |
| | | | 2.ಜನತದರ್ಶನ ಮನವಿಗಳಿಗೆ | 500.00 | – | 500.00 | 800 | 25.00 | 40 | 165.00 | 264 |
| | | | **4. ಗಂಗಾ ಕಲ್ಯಾಣ ನೀರಾವರಿ ಯೋಜನೆ** | | | | | | | | |
| | | | 1. ವೈಯಕ್ತಿಕ/ಸಾಮೂಹಿಕ | 7542.00 | – | 7542.00 | 3492 | 4.50 | 175 | 2488.86 | 1152 |
| | | | 2. ಕಾಯ್ದಿರಿಸಿದ ಮೊತ್ತ(10%) | 950.00 | – | 950.00 | 475 | 377.10 | 24 | 313.50 | 157 |
| | | | 3. ಏತ ನೀರಾವರಿ | 500.00 | – | 500.00 | 533 | 47.50 | 27 | 174.57 | 176 |
| | | | 4. ಸಾಲ/ಇತರೆ | 508.00 | – | 508.00 | – | 26.45 | – | 158.07 | 1152 |
| | | | **ಗಂಗಾ ಕಲ್ಯಾಣ ಒಟ್ಟು** | **9500.00** | – | **9500.00** | **4500** | **455.55** | **226** | **3135.00** | **2637** |
| | | | 5.ಎನ್.ಬಿ.ಸಿ.ಎಫ್.ಡಿ.ಸಿ. ಮರುಪಾವತಿ ಕಂತು ಪಾವತಿಸಲು | 3000.00 | – | 3000.00 | – | – | – | – | – |
| | | | 6.ಆಡಳಿತಾತ್ಮಕ ವೆಚ್ಚ (ಅನುದಾನದ ಮೇಲೆ ಶೇ.5ರಷ್ಟು) | 1000.00 | – | 1000.00 | – | – | – | – | – |
| | **ಒಟ್ಟು** | | **ಆಯವ್ಯಯ ಒಟ್ಟು** | **20000.00** | **5000.00** | **25000.00** | **30876** | **1030.55** | **1544** | **6930.00** | **11341** |
| | **ಕಳೆದ ಸಾಲುಗಳ ಉಳಿಕೆ ಮೊತ್ತ** | 3200.00 | 1. ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ | 1200.00 | – | 1200.00 | 2400 | 60.00 | 120 | 396.00 | 792 |
| | | | 2. ಸ್ವಯಂ ಉದ್ಯೋಗ ಸಾಲ ಯೋಜನೆ | 2000.00 | – | 2000.00 | 4000 | 100.00 | 200 | 660.00 | 1320 |
| | | | **ಒಟ್ಟು** | **3200.00** | – | **3200.00** | **6400** | **160.00** | **320** | **1056** | **2112** |
| | **ಎಲ್ಲಾ ಒಟ್ಟು** | | **ಎಲ್ಲಾ ಒಟ್ಟು** | **23200.00** | **5000.00** | **28200.00** | **37276** | **1190.55** | **1864** | **7986.00** | **13453** |

## 2019–20ನೇ ಸಾಲಿನಲ್ಲಿ ನಿಗಮದಿಂದ ಅನುಷ್ಠಾನಗೊಳಿಸಲಾಗುವ ಯೋಜನೆಗಳು.

**ರಾಜ್ಯ ಸರ್ಕಾರದ ಅನುದಾನದ ಯೋಜನೆಗಳು:**

1. ಚೈತನ್ಯ ಸಹಾಯಧನ ಯೋಜನೆ.
2. ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ಸಾಲ ಯೋಜನೆ.
3. ಕಿರು ಸಾಲ ಯೋಜನೆ.
4. ಅರಿವು–ಶೈಕ್ಷಣಿಕ ಸಾಲ ಯೋಜನೆ.
5. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಬಡ್ಡಿ ರಹಿತ ಸಾಲ.
6. ಸಾಂಪ್ರದಾಯಿಕ ವೃತ್ತಿದಾರರ ಮತ್ತು ಕುಶಲ ಕರ್ಮಿಗಳಿಗೆ ಆರ್ಥಿಕ ನೆರವು.
7. ಕಳೆದ ಸಾಲುಗಳ ಉಳಿಕೆ ಮೊತ್ತದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು:
    1. ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ಸಾಲ ಯೋಜನೆ.
    2. ಸಾಂಪ್ರದಾಯಿಕ ವೃತ್ತಿದಾರರ ಮತ್ತು ಕುಶಲ ಕರ್ಮಿಗಳಿಗೆ ಆರ್ಥಿಕ ನೆರವು
8. **ಗಂಗಾ ಕಲ್ಯಾಣ ನೀರಾವರಿ ಯೋಜನೆ.**
    a) ವೈಯಕ್ತಿಕ ಕೊಳವೆಬಾವಿ/ತೆರೆದ ಬಾವಿ ನೀರಾವರಿ ಯೋಜನೆ.
    b) ಸಾಮೂಹಿಕ ಕೊಳವೆಬಾವಿ ನೀರಾವರಿ ಯೋಜನೆ.
    c) ಏತ ನೀರಾವರಿ ಯೋಜನೆ.

### ಯೋಜನೆಗಳ ಸಂಕ್ಷಿಪ್ತ ವಿವರಗಳು ಹಾಗೂ ಅನುಷ್ಠಾನದ ವಿಧಿವಿಧಾನಗಳು

**ಸರ್ಕಾರದ ಆದೇಶ ಸಂಖ್ಯೆ: ಸಕಇ 573 ಬಿಸಿಎ 95, ದಿನಾಂಕ:23/02/1996ರ ಪ್ರಕಾರ ನಿಗಮದ ಎಲ್ಲಾ ಯೋಜನೆಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ 1 ಮತ್ತು 2ಎಗೆ ಶೇ.70ರಷ್ಟು ಹಾಗೂ ಪ್ರವರ್ಗ–3ಎ ಮತ್ತು 3ಬಿಗೆ ಶೇ.30ರಷ್ಟು ಮೀಸಲಾತಿಯನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು.**

* * *

I. **<u>ಚೈತನ್ಯ ಸಹಾಯಧನ ಯೋಜನೆ:</u>**

1. ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿ ಸೇರಿದವರಾಗಿರಬೇಕು (ವಿಶ್ವಕರ್ಮ ಮತ್ತು ಇದರ ಉಪ ಸಮುದಾಯಗಳು, ಉಪ್ಪಾರ ಮತ್ತು ಇದರ ಉಪ ಸಮುದಾಯಗಳು, ಅಂಬಿಗ ಮತ್ತು ಇದರ ಉಪ ಸಮುದಾಯಗಳು ಮತ್ತು ಮತೀಯ ಅಲ್ಪಸಂಖ್ಯಾತರನ್ನು ಹೊರತುಪಡಿಸಿ) ಹಾಗೂ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶವರಿಗೆ ರೂ.40,000/– ಪಟ್ಟಣ ಪ್ರದೇಶದವರಿಗೆ ರೂ.55,000/– ಗಳ ಒಳಗಿರಬೇಕು.

2. ಬ್ಯಾಂಕ್‌ಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ.
3. **ಉದ್ದೇಶ:** ಕೃಷಿ ಅವಲಂಬಿತ ಚಟುವಟಿಕೆಗಳು, ವ್ಯಾಪಾರ, ಸೇವಾವಲಯ ಮತ್ತು ಸಾರಿಗೆ ವಲಯದ ಉದ್ದೇಶಗಳು.
4. ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 739 ಬಿಎಂಎಸ್ 2018, ಬೆಂಗಳೂರು ದಿನಾಂಕ:23/10/2018ರನ್ವಯ ಈ ಯೋಜನೆಯಲ್ಲಿ ಘಟಕ ವೆಚ್ಚ ರೂ.25000/-ಗಳಿಂದ ರೂ.5.00ಲಕ್ಷಗಳ ಘಟಕಗಳಿಗೆ ಶೇ.20ರಷ್ಟು ಗರಿಷ್ಟ ರೂ.25000/-ಗಳ ಸಹಾಯಧನ ಮಾತ್ರ ನಿಗಮದಿಂದ ಮಂಜೂರು ಮಾಡಲಾಗುವುದು. ಉಳಿಕೆ ಮೊತ್ತ ಬ್ಯಾಂಕ್ ಪಾಲಿನ ಸಾಲವಾಗಿರುತ್ತದೆ.
5. ಬ್ಯಾಂಕ್ ಪಾಲಿನ ಸಾಲಕ್ಕೆ ಬ್ಯಾಂಕ್‌ಗಳಲ್ಲಿ ವಿಧಿಸುವ ಚಾಲ್ತಿಯಲ್ಲಿರುವ ಬಡ್ಡಿದರ.
6. ಆಯಾ ಬ್ಯಾಂಕ್ ಶಾಖೆಗೆ ನಿಗದಿಪಡಿಸಿದ ಗುರಿಗೆ 1:1.25 ಅನುಪಾತದಲ್ಲಿ ಅರ್ಜಿ ಶಿಫಾರಸ್ಸು ಮಾಡುವುದು.
7. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 31 ಸಮನ್ವಯ 2013, ಬೆಂಗಳೂರು ದಿನಾಂಕ:25/02/2013ರನ್ವಯ ಈ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿಯ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.
8. ಸಹಾಯಧನ ಮಂಜೂರಾತಿಗೆ ಸಲ್ಲಿಸುವ ಪ್ರಸ್ತಾವನೆಯೊಂದಿಗೆ ಬ್ಯಾಂಕ್ ಶಾಖೆಯಿಂದ ನೀಡಿರುವ ಮಂಜೂರಾತಿ ಪತ್ರ/ಸಹಾಯಧನ ಕ್ಲೈಂ ಪತ್ರದ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.

**ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ-01ರಲ್ಲಿ ಪುಟ ಸಂಖ್ಯೆ: 25 ರಿಂದ 33 ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ-4ರಲ್ಲಿ ಪುಟ ಸಂಖ್ಯೆ:44ರಲ್ಲಿ ಇರಿಸಿದೆ.**

## II. ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ವೈಯಕ್ತಿಕ ಸಾಲ ಯೋಜನೆ:

**1.** ಹಿಂದುಳಿದ ವರ್ಗಗಳ ಜನರು ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ಚಟುವಟಿಕೆಗಳಿಗನುಸಾರ ಈ ಕೆಳಕಂಡಂತೆ ಸಾಲ ಮತ್ತು ಸಹಾಯಧನ ಸೌಲಭ್ಯವನ್ನು ಒದಗಿಸಲಾಗುವುದು:

1) ಘಟಕ ವೆಚ್ಚ ರೂ.50,000/-ಗಳಿಗೆ ಶೇ.30ರಷ್ಟು ಗರಿಷ್ಠ ರೂ.10,000/-ಗಳ ಸಹಾಯಧನ, ಉಳಿಕೆ ಶೇ.70ರಷ್ಟು ರೂ.40,000/-ಗಳನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ.

2) ಘಟಕ ವೆಚ್ಚ ರೂ.50,001/- ರಿಂದ ರೂ.1,00,000/-ಗಳವರೆಗೆ ಶೇ.20ರಷ್ಟು ಗರಿಷ್ಠ ರೂ.20,000/-ಗಳ ಸಹಾಯಧನ, ಉಳಿಕೆ ಶೇ.80ರಷ್ಟು ರೂ.80,000/-ಗಳನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ.

3) ಘಟಕ ವೆಚ್ಚ ರೂ.1,00,001/- ರಿಂದ ರೂ.2,00,000/-ಗಳವರೆಗೆ ಶೇ.15ರಷ್ಟು ಕನಿಷ್ಠ ರೂ.20,000/-ಗಳು ಗರಿಷ್ಠ ರೂ.30,000/-ಗಳ ಸಹಾಯಧನ, ಉಳಿಕೆ ಶೇ.85ರಷ್ಟು ರೂ.1,70,0000/-ಗಳನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ.

2. **ಅರ್ಹತೆ:**

1) ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. (ವಿಶ್ವಕರ್ಮ ಮತ್ತು ಇದರ ಉಪ ಸಮುದಾಯಗಳು, ಉಪ್ಪಾರ ಮತ್ತು ಇದರ ಉಪ ಸಮುದಾಯಗಳು, ಅಂಬಿಗ ಮತ್ತು ಇದರ ಉಪ ಸಮುದಾಯಗಳು ಮತ್ತು ಮತೀಯ ಅಲ್ಪಸಂಖ್ಯಾತರನ್ನು ಹೊರತುಪಡಿಸಿ)

2) ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40,000/-ಗಳು ಪಟ್ಟಣ ಪ್ರದೇಶದವರಿಗೆ ರೂ.55,000/-ಗಳ ಒಳಗಿರಬೇಕು.

3) ಅರ್ಜಿದಾರರ ವಯಸ್ಸು 18 ರಿಂದ 55 ವರ್ಷದೊಳಗಿರಬೇಕು.

4) ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

5) ಈ ಹಿಂದೆ ಈಗಾಗಲೇ ನಿಗಮದ ಯೋಜನೆಗಳಲ್ಲಿ ಸೌಲಭ್ಯ ಪಡೆದಿರಬಾರದು.

3. **ಸಾಲ ಮರುಪಾವತಿ ಅವಧಿ**: 3 ವರ್ಷಗಳು(ಮಾಸಿಕ ಕಂತುಗಳಲ್ಲಿ)

4. **ಸಾಲ ಉದ್ದೇಶಗಳು**: ಈ ಯೋಜನೆಯಲ್ಲಿ ಕೃಷಿ ಅವಲಂಭಿತ ಚಟುವಟಿಕೆಗಳು, ವ್ಯಾಪಾರ ಚಟುವಟಿಕೆಗಳು ಹಾಗೂ ಸೇವಾ ವಲಯ ಚಟುವಟಿಕೆಗಳಿಗೆ ಸಾಲ ಸೌಲಭ್ಯ ಒದಗಿಸಲಾಗುವುದು.

**ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ-01ರಲ್ಲಿ ಪುಟ ಸಂಖ್ಯೆ: 25 ರಿಂದ 33 ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ-4ರಲ್ಲಿ ಪುಟ ಸಂಖ್ಯೆ:44ರಲ್ಲಿ ಇರಿಸಿದೆ.**

## III. **ಕಿರು ಸಾಲ ಯೋಜನೆ**:

ಈ ಯೋಜನೆಯಲ್ಲಿ ಕುಶಲಿ ಅಥವಾ ಕುಶಲಿಯಲ್ಲದ ವ್ಯಕ್ತಿಗಳು ನಗರ, ಪಟ್ಟಣ ಮತ್ತು ಹೋಬಳಿ ಹಂತಗಳಲ್ಲಿ ಸಣ್ಣ ಪುಟ್ಟ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವ ಸಹಾಯ ಗುಂಪುಗಳ ಮೂಲಕ ಸಾಲ ಸೌಲಭ್ಯ ಒದಗಿಸಲಾಗುವುದು.

1. **ಸಾಲದ ಉದ್ದೇಶ**: ಸಣ್ಣ ಪುಟ್ಟ ವ್ಯಾಪಾರ ಚಟುವಟಿಕೆಗಳಾದ ಹಣ್ಣು ವ್ಯಾಪಾರ, ತರಕಾರಿ ವ್ಯಾಪಾರ, ಹಾಲು ವ್ಯಾಪಾರ, ಮೀನು ವ್ಯಾಪಾರ, ಟೀ/ಕಾಫಿ ಸ್ಟಾಲ್ ಇತ್ಯಾದಿ ಸಣ್ಣ ಪುಟ್ಟ ವ್ಯಾಪಾರದ ಚಟುವಟಿಕೆಗಳಿಗೆ ಪ್ರತಿ ಸದಸ್ಯರಿಗೆ ಗರಿಷ್ಠ ರೂ.15,000/-ಗಳ ಆರ್ಥಿಕ ನೆರವು.

2. **ಅರ್ಹತೆ**: ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. (ವಿಶ್ವಕರ್ಮ ಮತ್ತು ಇದರ ಉಪ ಸಮುದಾಯಗಳು, ಉಪ್ಪಾರ ಮತ್ತು ಇದರ ಉಪ ಸಮುದಾಯಗಳು, ಅಂಬಿಗ ಮತ್ತು ಇದರ ಉಪ ಸಮುದಾಯಗಳು ಮತ್ತು ಮತೀಯ ಅಲ್ಪಸಂಖ್ಯಾತರನ್ನು ಹೊರತುಪಡಿಸಿ)
3. **ಸಹಾಯಧನ**: ಪ್ರತಿ ಸದಸ್ಯರಿಗೆ ಗರಿಷ್ಠ ರೂ.5,000/-ಗಳು.
4. **ಸಾಲದ ಮೊತ್ತ**: ಪ್ರತಿ ಸದಸ್ಯರಿಗೆ ಗರಿಷ್ಠ ರೂ.10,000/-ಗಳು.
5. **ಬಡ್ಡಿದರ**: ಸ್ವ ಸಹಾಯ ಸಂಘಗಳು ಸಾಲದ ಮೊತ್ತವನ್ನು ವಾರ್ಷಿಕ ಶೇ.4ರ ಬಡ್ಡಿಯೊಂದಿಗೆ ನಿಗಮಕ್ಕೆ ಹಿಂದಿರುಗಿಸಬೇಕಾಗಿರುತ್ತದೆ. ಶೇ.1ರ ಭಾಗ ಬಡ್ಡಿಯನ್ನು ಹೆಚ್ಚುವರಿಯಾಗಿ ಪಡೆದು ಸ್ವ-ಸಹಾಯ ಗುಂಪುಗಳ ಸೇವಾ ಶುಲ್ಕವಾಗಿ ಇಟ್ಟುಕೊಳ್ಳಬಹುದು.
6. ಫಲಾನುಭವಿಗಳು ಸ್ವ ಸಹಾಯ ಗುಂಪುಗಳ ಸದಸ್ಯರಾಗಿರಬೇಕು. ಫಲಾನುಭವಿಗಳು ಬಿ.ಪಿ.ಎಲ್. ಕುಟುಂಬಕ್ಕೆ ಸೇರಿದವರಾಗಿರಬೇಕು. ಸರ್ಕಾರಿ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರಬಾರದು.
7. **ಮರುಪಾವತಿ**: ಸ್ವ ಸಹಾಯ ಗುಂಪುಗಳ ಸಾಲದ ಮೊತ್ತವನ್ನು 36 ತಿಂಗಳಲ್ಲಿ, 12 ತ್ರೈಮಾಸಿಕ ಕಂತುಗಳಲ್ಲಿ ಸಾಲ ಮರುಪಾವತಿ ಮಾಡಬೇಕು.

**ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ-01ರಲ್ಲಿ ಪುಟ ಸಂಖ್ಯೆ: 25 ರಿಂದ 33 ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ-4ರಲ್ಲಿ ಪುಟ ಸಂಖ್ಯೆ:44ರಲ್ಲಿ ಇರಿಸಿದೆ**

## IV. <u>**ಅರಿವು-ಶೈಕ್ಷಣಿಕ ಸಾಲ ಯೋಜನೆ**</u>:

1. **ಸಾಲದ ಉದ್ದೇಶ**: ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕಾಭಿವೃದ್ಧಿಗಾಗಿ ಆರ್ಥಿಕ ನೆರವು.
2. **ಸಾಲದ ಮೊತ್ತ**: ವಾರ್ಷಿಕ ರೂ.1.00ಲಕ್ಷಗಳಂತೆ ಕೋರ್ಸ್‌ನ ಅವಧಿಗೆ ಗರಿಷ್ಠ ರೂ.4.00ಲಕ್ಷಗಳಿಂದ ರೂ.5.00ಲಕ್ಷಗಳ ವರೆಗೆ ಸಾಲ.
3. **ಬಡ್ಡಿದರ**: ವಾರ್ಷಿಕ ಶೇ.2ರಷ್ಟು.
4. **ಅರ್ಹತೆ**:

   a) ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. (ವಿಶ್ವಕರ್ಮ ಮತ್ತು ಇದರ ಉಪ ಸಮುದಾಯಗಳು, ಉಪ್ಪಾರ ಮತ್ತು ಇದರ ಉಪ ಸಮುದಾಯಗಳು, ಅಂಬಿಗ ಮತ್ತು ಇದರ ಉಪ ಸಮುದಾಯಗಳು ಮತ್ತು ಮತೀಯ ಅಲ್ಪಸಂಖ್ಯಾತರನ್ನು ಹೊರತುಪಡಿಸಿ)

   b) ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.3.50ಲಕ್ಷಗಳ ಮಿತಿಯಲ್ಲಿರಬೇಕು.

   c) ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ (ಸಿ.ಇ.ಟಿ.) ಪ್ರವೇಶ ಪಡೆದಿರಬೇಕು.

5. **ವ್ಯಾಸಂಗದ ಕೋರ್ಸ್‌ಗಳು:** (1)ಬಿ.ಇ., (2)ಎಂ.ಬಿ.ಬಿ.ಎಸ್., (3)ಬಿ.ಯೂ.ಎಂ.ಎಸ್., (4)ಬಿ.ಡಿ.ಎಸ್. (5)ಬಿ.ಎ.ಎಂ.ಎಸ್. (6)ಬಿ.ಎಚ್.ಎಂ.ಎಸ್. (7)ಎಂ.ಬಿ.ಎ. (8)ಎಂ.ಟೆಕ್. (9)ಎಂ.ಇ., (10)ಎಂ.ಡಿ., (11)ಪಿಹೆಚ್.ಡಿ. (12)ಬಿ.ಸಿ.ಎ./ಎಂ.ಸಿ.ಎ (13)ಎಂ.ಎಸ್.ಆಗ್ರಿಕಲ್ಚರ್ (14)ಬಿ.ಎಸ್‌ಸಿ. ನರ್ಸಿಂಗ್, (15)ಬಿ.ಫಾರಂ/ಎಂ.ಫಾರಂ (16)ಬಿ.ಎಸ್‌ಸಿ. ಪ್ಯಾರಾ ಮೆಡಿಕಲ್ (17)ಬಿ.ಎಸ್‌ಸಿ. ಬಯೋ ಟೆಕ್ನಾಲಜಿ (18)ಬಿ.ಟೆಕ್ (19)ಬಿ.ಪಿ.ಟಿ. (20)ಬಿ.ವಿ.ಎಸ್.ಸಿ/ಎಂ.ವಿ.ಎಸ್.ಸಿ. (21)ಬಿ.ಎನ್.ಎಂ. (22)ಬಿ.ಹೆಚ್.ಎಮ್. (23)ಎಂ.ಡಿ.ಎಸ್. (24)ಎಂ.ಎಸ್.ಡಬ್ಲ್ಯೂ (25)ಎಲ್.ಎಲ್.ಎಂ. (26)ಎಂ.ಎಫ್.ಎ. (27)ಎಂ.ಎಸ್‌ಸಿ. ಬಯೋ ಟೆಕ್ನಾಲಜಿ ಮತ್ತು (28)ಎಂ.ಎಸ್‌ಸಿ. ಎಜಿ.

6. **ಮರುಪಾವತಿ:** ಕೋರ್ಸ್ ಪೂರ್ಣಗೊಂಡ 4 ತಿಂಗಳ ನಂತರ 3 ವರ್ಷಗಳಲ್ಲಿ ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡುವುದು.

7. **ಅಭ್ಯರ್ಥಿಗಳ ಆಯ್ಕೆ:** ಈ ಕಾರ್ಯಕ್ರಮದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಪ್ರವೇಶ ಪಡೆದು ವ್ಯಾಸಂಗ ಮಾಡುವ ವಿದ್ಯಾರ್ಥಿಗಳನ್ನು ಹೊರತು ಪಡಿಸಿ, ಇತರೆ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡುವುದು.

**ಜಿಲ್ಲಾವಾರು ಗುರಿಯನ್ನು ಅನುಬಂಧ-3ರಲ್ಲಿ ಪುಟ ಸಂಖ್ಯೆ:43ರಲ್ಲಿ ಇರಿಸಿದೆ**

## V. ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಬಡ್ಡಿ ರಹಿತ ಸಾಲ ಯೋಜನೆ:

1. **ಉದ್ದೇಶ:** ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪಿಹೆಚ್.ಡಿ. ಪೋಸ್ಟ್ ಡಾಕ್ಟ್ರಲ್ ಮತ್ತು ಮಾಸ್ಟರ್ ಡಿಗ್ರಿ ವ್ಯಾಸಂಗಕ್ಕೆ ಪ್ರವೇಶ ಹೊಂದಿದ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿ ವಿದ್ಯಾರ್ಥಿಗಳಿಗೆ ಬಡ್ಡಿ ರಹಿತ ಸಾಲ. (ವಿಶ್ವಕರ್ಮ ಮತ್ತು ಇದರ ಉಪ ಸಮುದಾಯಗಳು, ಉಪ್ಪಾರ ಮತ್ತು ಇದರ ಉಪ ಸಮುದಾಯಗಳು, ಅಂಬಿಗ ಮತ್ತು ಇದರ ಉಪ ಸಮುದಾಯಗಳು ಮತ್ತು ಮತೀಯ ಅಲ್ಪಸಂಖ್ಯಾತರನ್ನು ಹೊರತುಪಡಿಸಿ)

2. **ಸಾಲದ ಮೊತ್ತ:** ವಾರ್ಷಿಕ ಗರಿಷ್ಠ ರೂ.3.50ಲಕ್ಷಗಳಂತೆ 3 ವರ್ಷದ ಅವಧಿಗೆ ಗರಿಷ್ಠ ರೂ.10.00ಲಕ್ಷಗಳು.

3. **ಆದಾಯ ಮಿತಿ:** ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯಮಿತಿ ರೂ.3.50ಲಕ್ಷಗಳ ಮಿತಿಯಲ್ಲಿರಬೇಕು.

4. **ವಯೋಮಿತಿ:** ಅಭ್ಯರ್ಥಿಯ ವಯಸ್ಸು 35 ವರ್ಷಗಳ ವಯೋಮಿತಿಯಲ್ಲಿರಬೇಕು.

5. ಅರ್ಹತಾ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು.

6. **ವ್ಯಾಸಂಗದ ಕೋರ್ಸ್‌ಗಳು**: (1)ಇಂಜಿನಿಯರಿಂಗ್ & ಟೆಕ್ನಾಲಜಿ, (2)ಮ್ಯಾನೇಜ್‌ಮೆಂಟ್ & ಕಾಮರ್ಸ್, (3)ಸೈನ್ಸ್ & ಟೆಕ್ನಾಲಜಿ, (4)ಅಗ್ರಿಕಲ್ಚರ್ & ಅಲೈಡ್ ಸೈನ್ಸ್‌ಸ್/ಟೆಕ್ನಾಲಜಿ, (5)ಮೆಡಿಸಿನ್ ಮತ್ತು (6)ಹ್ಯುಮ್ಯಾನಿಟೀಸ್ & ಸೋಸಿಯಲ್ ಸೈನ್ಸ್‌ಸ್.
7. ವ್ಯಾಸಂಗಕ್ಕೆ ಪ್ರವೇಶ ಪಡೆದ ಬಗ್ಗೆ ವಿದೇಶಿ ವಿಶ್ವವಿದ್ಯಾಲಯಗಳ ಪ್ರವೇಶ ಪತ್ರ, ವೀಸಾ, ಪಾಸ್‌ಪೋರ್ಟ್, ಏರ್‌ಟಿಕೇಟ್ ಪ್ರತಿ ಒದಗಿಸಬೇಕು.
8. ಸಾಲದ ಭದ್ರತೆಗೆ ವಿದ್ಯಾರ್ಥಿಯ ತಂದೆ ಅಥವಾ ಜಾಮೀನುದಾರರು ಹೊಂದಿರುವ ಸ್ಥಿರಾಸ್ತಿಯನ್ನು ನಿಗಮಕ್ಕೆ ಆಧಾರ ಮಾಡಬೇಕು. (ಕೊಲ್ಯಾಟರಲ್ ಸೆಕ್ಯೂರಿಟಿ)
9. **ಅಭ್ಯರ್ಥಿಗಳ ಆಯ್ಕೆ:** ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಲಾಗುವುದು.
10. **ಮರುಪಾವತಿ ಅವಧಿ:** ಮರುಪಾವತಿ ಅವಧಿ ಗರಿಷ್ಠ 60 ಮಾಸಿಕ ಕಂತುಗಳು. ವ್ಯಾಸಂಗ ಪೂರ್ಣಗೊಂಡ 1 ವರ್ಷದ ನಂತರ ಅಥವಾ ಉದ್ಯೋಗ ದೊರೆತ 6 ತಿಂಗಳ ನಂತರ ಮರುಪಾವತಿ ಕಂತು ಪ್ರಾರಂಭವಾಗುತ್ತದೆ.

## VI. ಗಂಗಾ ಕಲ್ಯಾಣ ನೀರಾವರಿ ಯೋಜನೆ:

1. **ಉದ್ದೇಶ**: ಹಿಂದುಳಿದ ವರ್ಗಗಳ ಸಣ್ಣ ಮತ್ತು ಅತಿಸಣ್ಣ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವುದು.
2. **ಅರ್ಹತೆ:** ಹಿಂದುಳಿದ ವರ್ಗಗಳ ಪ್ರವರ್ಗ–1ಎ, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿದ್ದು, ಸಣ್ಣ ಮತ್ತು ಅತಿ ಸಣ್ಣ ರೈತರಾಗಿರಬೇಕು. (ವಿಶ್ವಕರ್ಮ ಮತ್ತು ಇದರ ಉಪ ಸಮುದಾಯಗಳು, ಉಪ್ಪಾರ ಮತ್ತು ಇದರ ಉಪ ಸಮುದಾಯಗಳು, ಅಂಬಿಗ ಮತ್ತು ಇದರ ಉಪ ಸಮುದಾಯಗಳು ಮತ್ತು ಮತೀಯ ಅಲ್ಪಸಂಖ್ಯಾತರನ್ನು ಹೊರತುಪಡಿಸಿ)
3. **ಸೌಲಭ್ಯ:**

    1. **ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ**: ಈ ಯೋಜನೆಯಲ್ಲಿ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು. ಉಳಿಕೆ ಜಿಲ್ಲೆಗಳಲ್ಲಿ ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಇರುವ ಕನಿಷ್ಠ 2 ಎಕರೆ ಜಮೀನು ಇರಬೇಕು.

        **ಘಟಕವೆಚ್ಚ;** ರೂ.2.50ಲಕ್ಷಗಳು. ರೂ.2.00ಲಕ್ಷಗಳ ಸಹಾಯಧನ(ಸಬ್ಸಿಡಿ) ಹಾಗೂ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ರೂ.50,000/–ಗಳ ಸಾಲ.

ರೂ.2.00ಲಕ್ಷಗಳ ಸಹಾಯಧನದಲ್ಲಿ ಕೊಳವೆ ಬಾವಿ ಕೊರೆಯುವ ವೆಚ್ಚ, ಪಂಪ್‌ಸೆಟ್ ಅಳವಡಿಕೆ ಹಾಗೂ ಪೂರಕ ಸಾಮಗ್ರಿಗಳ ಸರಬರಾಜಿಗೆ ರೂ.1.50ಲಕ್ಷಗಳ ವೆಚ್ಚ ಭರಿಸಲಾಗುವುದು.

ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಆರ್.ಆರ್. ಸಂಖ್ಯೆ ನೀಡಿದ ನಂತರ ವಿದ್ಯುತ್ ಸರಬರಾಜು ಕಂಪನಿಗಳಿಗೆ ವಿದ್ಯುದ್ಧೀಕರಣ ವೆಚ್ಚವಾಗಿ, ಪ್ರತಿ ಕೊಳವೆ ಬಾವಿಗೆ ರೂ.50,000/-ಗಳಂತೆ ಪಾವತಿಸಲಾಗುವುದು.

ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳಲ್ಲಿ ವೈಯಕ್ತಿಕ ಕೊಳವೆ ಬಾವಿಯ ಘಟಕ ವೆಚ್ಚ ರೂ.4.00ಲಕ್ಷಗಳು, ಇದರಲ್ಲಿ ರೂ.3.50ಲಕ್ಷಗಳ ಸಹಾಯಧನ ಹಾಗೂ ರೂ.50000/-ಗಳ ಸಾಲವಾಗಿರುತ್ತದೆ.

2. **ಸಾಮೂಹಿಕ ನೀರಾವರಿ ಕೊಳವೆ ಬಾವಿ ಯೋಜನೆ**: ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದ ಕನಿಷ್ಠ 3 ಜನ ಸಣ್ಣ ಮತ್ತು ಅತಿ ಸಣ್ಣ ರೈತರು ಹೊಂದಿರುವ 8 ಎಕರೆ ಮತ್ತು ಅದಕ್ಕಿಂತ ಹೆಚ್ಚಿನ ಜಮೀನಿಗೆ ಸಾಮೂಹಿಕವಾಗಿ ನೀರಾವರಿ ಸೌಲಭ್ಯ.

   **ಘಟಕ ವೆಚ್ಚ:** 8-15 ಎಕರೆ ಜಮೀನಿಗೆ ರೂ.4.00ಲಕ್ಷಗಳ ವೆಚ್ಚದಲ್ಲಿ 2 ಕೊಳವೆಬಾವಿ ಹಾಗೂ 15 ಎಕರೆಗಿಂತ ಹೆಚ್ಚು ಜಮೀನು ಒಳಪಡುವ ಘಟಕಗಳಿಗೆ ನಿಗದಿತ ಘಟಕ ವೆಚ್ಚ ರೂ.6.00ಲಕ್ಷಗಳ ವೆಚ್ಚದಲ್ಲಿ 3 ಕೊಳವೆ ಬಾವಿಗಳನ್ನು ಕೊರೆಯಿಸಿ ಪಂಪ್‌ಸೆಟ್ ಮತ್ತು ಉಪಕರಣಗಳನ್ನು ಸರಬರಾಜು ಮಾಡುವುದು ಹಾಗೂ ವಿದ್ಯುದ್ಧೀಕರಣಕ್ಕೆ ಠೇವಣಿ ಪಾವತಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿ ನೀರಾವರಿ ಸೌಲಭ್ಯ ಒದಗಿಸುವುದು. ಇದು ಪೂರ್ಣ ಅನುದಾನವಾಗಿರುತ್ತದೆ.

3. **ತೆರೆದಬಾವಿ:** ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಗೆ ನಿಗದಿಪಡಿಸಿದ ಘಟಕ ವೆಚ್ಚದಲ್ಲಿ ಕರಾವಳಿ ಹಾಗೂ ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ತೆರೆದಬಾವಿ ನೀರಾವರಿ ಸೌಲಭ್ಯ ಒದಗಿಸಲು ಅವಕಾಶವಿರುತ್ತದೆ.

4. **ಸಾಮೂಹಿಕ ಏತ ನೀರಾವರಿ ಯೋಜನೆ:** ಭೂಮಟ್ಟದಲ್ಲಿ ಶಾಶ್ವತವಾಗಿ ದೊರೆಯುವ ಜಲಸಂಪನ್ಮೂಲಗಳಾದ ನದಿ, ಕೆರೆ, ಹಳ್ಳ ಇವುಗಳಿಗೆ ಮೋಟಾರ್ ಅಳವಡಿಸಿ ಪೈಪ್‌ಲೈನ್ ಮೂಲಕ ಖುಷ್ಕಿ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವುದು.

   **ಘಟಕವೆಚ್ಚ:** ಸಾಮೂಹಿಕ ನೀರಾವರಿ ಯೋಜನೆಗೆ ನಿಗದಿಪಡಿಸಿದ ಘಟಕ ವೆಚ್ಚದಲ್ಲಿ ಸೌಲಭ್ಯ ಒದಗಿಸಲಾಗುವುದು.

   ಈ ಕಾರ್ಯಕ್ರಮಕ್ಕೆ ಆಯಾ ವಿಧಾನಸಭಾ ಕ್ಷೇತ್ರಕ್ಕೆ ನಿಗದಿಪಡಿಸಿದ ಆರ್ಥಿಕ ಗುರಿಯನ್ವಯ ಮೀಸಲಾತಿ ಅನುಪಾತ ಪ್ರವರ್ಗ-1 ಮತ್ತು 2ಎಗೆ 70% ಹಾಗೂ ಪ್ರವರ್ಗ-3ಎ ಮತ್ತು 3ಬಿಗೆ 30%ರಂತೆ ವೈಯಕ್ತಿಕ/ಸಾಮೂಹಿಕ ನೀರಾವರಿ ಘಟಕಗಳನ್ನು ಆಯ್ಕೆ ಮಾಡಿ ಸೌಲಭ್ಯ ಒದಗಿಸಬೇಕು.

5. **ಮರುಪಾವತಿ ಅವಧಿ**: ಸಾಲದ ಮರುಪಾವತಿ ಅವಧಿ 3 ವರ್ಷಗಳು.

6. ಕರ್ನಾಟಕ ಅಂತರ್ಜಲ ಅಧಿನಿಯಮದನ್ವಯ ಈ ಕೆಳಕಂಡ 35 ತಾಲ್ಲೂಕುಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಕೊಳವೆಬಾವಿ ಕೊರೆಯುವ ಮುನ್ನ ಅಂತರ್ಜಲ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು. ಅನುಮತಿ ಪಡೆದಂತಹ ಫಲಾನುಭವಿಗಳ ಜಮೀನುಗಳಲ್ಲಿ ಕೊಳವೆ ಬಾವಿ ಕೊರೆಯಲು ಕ್ರಮವಹಿಸತಕ್ಕದ್ದು.

| **ಕ್ರ. ಸಂ.** | **ಜಿಲ್ಲೆಯ ಹೆಸರು** | **ಕ್ರ. ಸಂ.** | **ತಾಲ್ಲೂಕುಗಳ ಹೆಸರು.** |
|---|---|---|---|
| 1 | ಬೆಂಗಳೂರು ನಗರ | 1 | ಆನೇಕಲ್ |
| | | 2 | ಬೆಂಗಳೂರು ಪೂರ್ವ |
| | | 3 | ಬೆಂಗಳೂರು ಉತ್ತರ |
| | | 4 | ಬೆಂಗಳೂರು ದಕ್ಷಿಣ |
| 2 | ಬೆಂಗಳೂರು ಗ್ರಾ|| | 5 | ದೇವನಹಳ್ಳಿ |
| | | 6 | ದೊಡ್ಡಬಳ್ಳಾಪುರ |
| | | 7 | ಹೊಸಕೋಟೆ |
| | | 8 | ನೆಲಮಂಗಲ |
| 3 | ರಾಮನಗರ | 9 | ಕನಕಪುರ |
| | | 10 | ರಾಮನಗರ |
| 4 | ತುಮಕೂರು | 11 | ಚಿಕ್ಕನಾಯ್ಕನಹಳ್ಳಿ |
| | | 12 | ಕೊರಟಗೆರೆ |
| | | 13 | ಮಧುಗಿರಿ |
| 5 | ಚಿತ್ರದುರ್ಗ | 14 | ಚಿತ್ರದುರ್ಗ |
| | | 15 | ಹೊಳಲ್ಕೆರೆ |
| 6 | ಕೋಲಾರ | 16 | ಬಂಗಾರಪೇಟೆ |
| | | 17 | ಕೋಲಾರ |
| | | 18 | ಮಾಲೂರು |
| | | 19 | ಮುಳಬಾಗಿಲು |
| | | 20 | ಶ್ರೀನಿವಾಸಪುರ |
| 7 | ಚಿಕ್ಕಬಳ್ಳಾಪುರ | 21 | ಚಿಕ್ಕಬಳ್ಳಾಪುರ |
| | | 22 | ಚಿಂತಾಮಣಿ |
| | | 23 | ಗೌರಿಬಿದನೂರು |
| | | 24 | ಗುಡಿಬಂಡೆ |
| | | 25 | ಶಿಡ್ಲಘಟ್ಟ |
| 8 | ದಾವಣಗೆರೆ | 26 | ಜಗಳೂರು |
| 9 | ಬೆಳಗಾವಿ | 27 | ಅಥಣಿ |
| | | 28 | ಬೈಲಹೊಂಗಲ |
| | | 29 | ರಾಮದುರ್ಗ |
| | | 30 | ಸವದತ್ತಿ |

| | | | |
|---|---|---|---|
| 10 | ಬಾಗಲಕೋಟೆ | 31 | ಬಾದಾಮಿ |
| | | 32 | ಬಾಗಲಕೋಟೆ |
| 11 | ಬಳ್ಳಾರಿ | 33 | ಹಗರಿ ಬೊಮ್ಮನಹಳ್ಳಿ |
| | | 34 | ಹಡಗಲಿ |
| 12 | ಕೊಪ್ಪಳ | 35 | ಯಲಬುರ್ಗಾ |
| | | 36 | |
| | | 37 | |
| | | 38 | |
| | | 39 | |
| | | 40 | |
| | | 41 | |
| | | 42 | |
| | | 43 | |

**ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ–2ರಲ್ಲಿ ಪುಟ ಸಂಖ್ಯೆ: 34 ರಿಂದ 42 ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ–5ರಲ್ಲಿ ಪುಟ ಸಂಖ್ಯೆ:45ರಲ್ಲಿ ಇರಿಸಿದೆ.**

## VII. ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ವೃತ್ತಿ ಕಸುಬುದಾರರಿಗೆ ಸಾಲ ಮತ್ತು ಸಹಾಯಧನ ಯೋಜನೆ:

ಸಾಂಪ್ರದಾಯಿಕ ವೃತ್ತಿ ಮತ್ತು ಕುಶಕಲರ್ಮಿಗಳಿಗೆ ಅವರ ವೃತ್ತಿ ಕೌಶಲ್ಯತೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ವೃತ್ತಿಯನುಸಾರ ಈ ಕೆಳಕಂಡಂತೆ ಸಾಲ ಸೌಲಭ್ಯ ಒದಗಿಸಲಾಗುವುದು.

1) ಘಟಕ ವೆಚ್ಚ ರೂ.50,000/–ಗಳಿಗೆ ಶೇ.30ರಷ್ಟು ಗರಿಷ್ಠ ರೂ.10,000/–ಗಳ ಸಹಾಯಧನ, ಉಳಿಕೆ ಶೇ.70ರಷ್ಟು ರೂ.40,000/–ಗಳನ್ನು ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಸಾಲ.
2) ಘಟಕ ವೆಚ್ಚ ರೂ.50,001/– ರಿಂದ ರೂ.1,00,000/–ಗಳವರೆಗೆ ಶೇ.20ರಷ್ಟು ಗರಿಷ್ಠ ರೂ.20,000/–ಗಳ ಸಹಾಯಧನ, ಉಳಿಕೆ ಶೇ.80ರಷ್ಟು ರೂ.80,000/–ಗಳನ್ನು ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಸಾಲ.
3) ಘಟಕ ವೆಚ್ಚ ರೂ.1,00,001/– ರಿಂದ ರೂ.2,00,000/–ಗಳವರೆಗೆ ಶೇ.15ರಷ್ಟು ಕನಿಷ್ಠ ರೂ.20,000/–ಗಳು ಗರಿಷ್ಠ ರೂ.30,000/–ಗಳ ಸಹಾಯಧನ, ಉಳಿಕೆ ಶೇ.85ರಷ್ಟು ರೂ.1,70,0000/–ಗಳನ್ನು ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಸಾಲ.

**ಅರ್ಹತೆ:**

1) ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. (ವಿಶ್ವಕರ್ಮ ಮತ್ತು ಇದರ ಉಪ ಸಮುದಾಯಗಳು, ಉಪ್ಪಾರ ಮತ್ತು ಇದರ ಉಪ ಸಮುದಾಯಗಳು, ಅಂಬಿಗ ಮತ್ತು ಇದರ ಉಪ ಸಮುದಾಯಗಳು ಮತ್ತು ಮತೀಯ ಅಲ್ಪಸಂಖ್ಯಾತರನ್ನು ಹೊರತುಪಡಿಸಿ)

2) ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.40,000/–ಗಳು ಪಟ್ಟಣ ಪ್ರದೇಶದವರಿಗೆ ರೂ.55,000/–ಗಳ ಒಳಗಿರಬೇಕು.

3) ಅರ್ಜಿದಾರರ ವಯಸ್ಸು 18 ರಿಂದ 55 ವರ್ಷದೊಳಗಿರಬೇಕು.

4) ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

5) ಈ ಹಿಂದೆ ನಿಗಮದ ಯೋಜನೆಗಳಲ್ಲಿ ಸೌಲಭ್ಯ ಪಡೆದಿರಬಾರದು.

6) **ಸಾಲದ ಮರುಪಾವತಿ ಅವಧಿ**: 3 ವರ್ಷಗಳು(ಮಾಸಿಕ ಕಂತುಗಳಲ್ಲಿ)

7) **ಈ ಕೆಳಕಂಡ 47 ಸಾಂಪ್ರದಾಯಿಕ ವೃತ್ತಿ/ಕುಶಲ ವೃತ್ತಿ ಕಸಬುಗಳನ್ನು ಕೈಗೊಳ್ಳುತ್ತಿರಬೇಕು.**

| ಕ್ರ. ಸಂ. | ವೃತ್ತಿಗಳು | ಕ್ರ. ಸಂ. | ವೃತ್ತಿಗಳು | ಕ್ರ. ಸಂ. | ವೃತ್ತಿಗಳು |
|---|---|---|---|---|---|
| **1** | **2** | **3** | **4** | **4** | **5** |
| 1 | ಬಡಗಿ ಕೆಲಸ/ಮರದ ಕೆತ್ತನೆ | 2 | ಟೈಲರಿಂಗ್ | 3 | ಜೇನು ಸಾಕಾಣಿಕೆ |
| 4 | ಉಣ್ಣೆ ಮತ್ತು ಕಂಬಳಿ ನೇಯ್ಗೆ, | 5 | ಹತ್ತಿ ನೇಯ್ಗೆ/ನೇಕಾರಿಕೆ | 6 | ನಿಟ್ಟಿಂಗ್ ಕೆಲಸ |
| 7 | ಅಡಿಕೆ ಹಾಳೆಯಿಂದ ತಟ್ಟೆ ತಯಾರಿಕೆ | 8 | ಚರ್ಮದ ವಸ್ತುಗಳ ತಯಾರಿಕೆ | 9 | ಗಾಣದ ಕೆಲಸ |
| 10 | ಉಣ್ಣೆ ನೇಯ್ಗೆ ಮತ್ತು ಹಾಸು ಕಂಬಳಿ ತಯಾರಿಕೆ | 11 | ಅಗರಬತ್ತಿ ತಯಾರಿಕೆ | 12 | ಮೆಷನರಿ ವರ್ಕ್ಸ್ |
| 13 | ಸಿಲ್ಕ್ ರೀಲಿಂಗ್ ಮತ್ತು ಸಿಲ್ಕ್ ಟ್ವಿಸ್ಟಿಂಗ್ ಕೆಲಸ | 14 | ಕಾಯರ್ ಫೈಬರ್ ತಯಾರಿಕೆ | 15 | ಹೂ ಕಟ್ಟುವ ವೃತ್ತಿ |
| 16 | ಪೊರಕೆ ಕಡ್ಡಿ ತಯಾರಿಕೆ | 17 | ವಿಗ್ರಹ/ಕಲ್ಲು ಕತ್ತನೆ ಕೆಲಸಗಳು | 18 | ಹೊಸೈರಿ ವಸ್ತುಗಳ ತಯಾರಿಕೆ |
| 19 | ಬಿದರಿ ವೇರ್ ಕೆಲಸ | 20 | ಲಾಂಡ್ರಿ/ದೋಬಿ ಕೆಲಸ | 21 | ಪಾತ್ರೆಗಳಿಗೆ ಕಲಾಯಿ |
| 21 | ಸುಣ್ಣ ಸುಡುವುದು | 23 | ಮೀನುಗಾರಿಕೆ | 24 | ವಾದ್ಯ ವೃಂದ ವೃತ್ತಿ |
| 25 | ಕ್ಷೌರಿಕ ವೃತ್ತಿ/ಸೆಲೂನ್ | 26 | ನಾಟಿ ಔಷಧಿ | 27 | ಹೈನುಗಾರಿಕೆ(ಗೌಳಿ ವೃತ್ತಿ) |
| 28 | ವಾಲಗ ಊದುವುದು | 29 | ಬಣ್ಣ/ಶೃಂಗಾರ(ಬ್ಯೂಟಿ ಪಾರ್ಲರ್)ಮಾಡುವ ವೃತ್ತಿ | 30 | ಬೈಸಿಕಲ್/ಆಟೋ ಮೊಬೈಲ್ ರಿಪೇರಿ |
| 31 | ದನಗಾಹಿ ವೃತ್ತಿ | 32 | ಶೀಟ್ ಮೆಟಲ್ ವೃತ್ತಿ | 33 | ವೆಲ್ಡಿಂಗ್ ವರ್ಕ್ಸ್ |
| 34 | ಬಳೆ ವ್ಯಾಪಾರ/ಮೇಣದ ಬತ್ತಿ | 35 | ಬಣ್ಣಗಾರಿಕೆ ಮತ್ತು ಮುದ್ರಣಗಾರಿಕೆ | 36 | ಕುರಿ ಸಾಕಾಣಿಕೆ |
| 37 | ಚಿನ್ನಬೆಳ್ಳಿ ಕೆಲಸ | 38 | ಮ್ಯಾಟ್ ತಯಾರಿಕೆ | 39 | ಕುಂಬಾರಿಕೆ/ಕಲಾತ್ಮಕ ಉತ್ಪನ್ನಗಳ ತಯಾರಿಕೆ |
| 40 | ಕಂಚು ಕೆಲಸ | 41 | ಗಾಡಿ/ರಥ ತಯಾರಿಕೆ | 42 | ನಾರಿನಿಂದ ವಿವಿಧ ಉತ್ಪನ್ನ ತಯಾರಿಕೆ |

| | | | | | |
|---|---|---|---|---|---|
| 43 | ಕಮ್ಮಾರಿಕೆ/ಕುಲುಮೆ | 44 | ಗ್ಲಾಸ್ ಬೀಡ್ಸ್ ತಯಾರಿಕೆ | 45 | ಬೆತ್ತದ ಕೆಲಸ (ರಟ್ಟನ್) ಆಟಿಕೆ/ ಗೊಂಬೆ ತಯಾರಿಕೆ ಮತ್ತು ಕೆತ್ತನೆ ಕೆಲಸ |
| 46 | ಮೆಟಲ್ ಕ್ರಾಫ್ಟ್ ಕೆಲಸ | 47 | ಟಿನ್ ವಸ್ತುಗಳ ತಯಾರಿಕೆ | | |

**ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ-1ರಲ್ಲಿ ಪುಟ ಸಂಖ್ಯೆ: 25 ರಿಂದ 33ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ-04ರಲ್ಲಿ ಪುಟ ಸಂಖ್ಯೆ:44ರಲ್ಲಿ ಇರಿಸಿದೆ.**

**ವಿಶೇಷ ಸೂಚನೆ: ಈ ಮೇಲ್ಕಂಡಂತೆ ಯೋಜನೆಗಳ ಮಾಹಿತಿಯು ಸಂಕ್ಷಿಪ್ತ ರೂಪದ್ದಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಸಂಬಂಧಿಸಿದ ಸರ್ಕಾರದ ಆದೇಶಗಳು ಹಾಗೂ ಮಾರ್ಗಸೂಚಿಗಳನ್ನು ಗಮನಿಸುವುದು.**

## VIII. ಕಳೆದ ಸಾಲುಗಳ ಉಳಿಕೆ ಮೊತ್ತದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳು:

2017-18 ಹಾಗೂ 2018-19ನೇ ಸಾಲಿನಲ್ಲಿ ಸಾಲ ವಸೂಲಾತಿ ಮೊತ್ತ, ಅನುದಾನದ ಮೇಲೆ ಗಳಿಸಿದ ಬಡ್ಡಿ ಮತ್ತು ಯೋಜನೆಗಳಲ್ಲಿ ಉಳಿದ ಹಣ ಸೇರಿಸಿ 2019-20ರ ಸಾಲಿನಲ್ಲಿ ಈ ಕೆಳಕಂಡಂತೆ 2 ಯೋಜನೆಗಳಲ್ಲಿ ಹೆಚ್ಚುವರಿ ಗುರಿ ನೀಡಲಾಗಿದೆ.

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ಯೋಜನೆ ಹೆಸರು | ನಿಗದಿಪಡಿಸಿದ ಮೊತ್ತ | ಫಲಾನುಭವಿಗಳ ಸಂಖ್ಯೆ | ಮಹಿಳೆಯರಿಗೆ ಶೇ.33 |
|---|---|---|---|---|
| 1 | ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ | 1200.00 | 2400 | 792 |
| 2 | ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ಸಾಲ ಯೋಜನೆ | 2000.00 | 4000 | 1320 |
| | **ಒಟ್ಟು** | **3200.00** | **6400** | **2112** |

ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ಅನುಬಂಧ-.....ರಲ್ಲಿ ಪುಟ ಸಂಖ್ಯೆ: ...... ರಿಂದ ..... ರವರೆಗೆ ಹಾಗೂ ಜಿಲ್ಲಾವಾರು ಗುರಿಯನ್ನು ಅನುಬಂಧ-......ರಲ್ಲಿ ಪುಟ ಸಂಖ್ಯೆ:.....ರಲ್ಲಿ ಇರಿಸಿದೆ.

## ನಿಗಮದ ಯೋಜನೆಗಳಡಿ ಸೌಲಭ್ಯ ಒದಗಿಸಲು ಸಾಲದ ಉದ್ದೇಶ ಅಥವಾ ಚಟುವಟಿಕೆಗಳಿಗೆ ನಿಗದಿಪಡಿಸಿದ ಕನಿಷ್ಠ ಘಟಕ ವೆಚ್ಚ

| ಕ್ರ. ಸಂ | ಉದ್ದೇಶಗಳು/ಆರ್ಥಿಕ ಚಟುವಟಿಕೆಗಳು | ನಿಗಧಿಪಡಿಸಿದ ಕನಿಷ್ಠ ಘಟಕ ವೆಚ್ಚ |
|---|---|---|
| 1 | ಹೈನುಗಾರಿಕೆ | 50,000 |
| 2 | ಕುರಿ ಸಾಕಾಣಿಕೆ | 50,000 |
| 3 | ಮೇಕೆ ಸಾಕಾಣಿಕೆ | 50,000 |
| 4 | ಬಟ್ಟೆ ವ್ಯಾಪಾರ | 35,000 |
| 5 | ಟೈಲರಿಂಗ್ | 25,000 |
| 6 | ಕಿರಾಣಿ, ದಿನಸಿ, ಪ್ರಾವಿಜನ್ ಸ್ಟೋರ್, ಪಾನ್ ಶಾಪ್, ಜನರಲ್ ಸ್ಟೋರ್, ಕಾಳುಕಡಿ ವ್ಯಾಪಾರ, ಪೆಟ್ಟಿ ಶಾಪ್ | 50,000 |
| 7 | ಸೆಲೂನ್/ಬ್ಯೂಟಿಪಾರ್ಲರ್ | 25,000 |

| | | |
|---|---|---|
| 8 | ಲ್ಯಾಂಡ್ರಿ / ಡ್ರೈಕ್ಲಿನರ್ | 25,000 |
| 9 | ತರಕಾರಿ, ಹೂವು ಹಣ್ಣು ವ್ಯಾಪಾರ, ತೆಂಗಿನ ಕಾಯಿ ವ್ಯಾಪಾರ. | 25,000 |
| 10 | ನೇಕಾರಿಕೆ/ಕಂಬಳಿ ನೇಯ್ಗೆ/ಚಾಪೆ ನೇಯ್ಗೆ/ಕುಷನ್ ವರ್ಕ್ಸ್ | 25,000 |
| 11 | ಹೋಟೆಲ್/ಟೀ ಸ್ಟಾಲ್/ಬೇಕರಿ/ಕ್ಯಾಟರಿಂಗ್/ ಕಾಂಡಿಮೆಂಟ್ಸ್/ಹಾಲು ಮಾರಾಟ/ಚಿಪ್ಸ್ ವ್ಯಾಪಾರ/ ಪಾನಿಪೂರಿ ಅಂಗಡಿ | 25,000 |
| 12 | ಕೋಳಿ ಸಾಕಾಣಿಕೆ/ಮೊಲ ಸಾಕಾಣಿಕೆ/ಮೀನು ಸಾಕಾಣಿಕೆ/ಮೊಟ್ಟೆ ವ್ಯಾಪಾರ | 25,000 |
| 13 | ಬಳೆ ವ್ಯಾಪಾರ/ಫ್ಯಾನ್ಸಿ ಸ್ಟೋರ್/ ಗೊಂಬೆ ವ್ಯಾಪಾರ/ ಸ್ಟೇಷನರಿ ವ್ಯಾಪಾರ | 25,000 |
| 14 | ವೆಲ್ಡಿಂಗ್ ವರ್ಕ್ಸ/ಎಲೆಕ್ಟ್ರೀಕಲ್ ಶಾಪ್/ ಆಟೋಮೊಬೈಲ್/ಇಂಜಿನಿಯರಿಂಗ್ ವರ್ಕ್ಸ್/ ಗ್ಯಾರೇಜ್ ವರ್ಕ್ಸ್/ ಮಿಷನರಿ ವರ್ಕ್ಸ್/ಮೆಟಲ್ ಕ್ರಾಫ್ಟ್ ವರ್ಕ್/ ಫೈಬರ್ ವರ್ಕ್ಸ್/ಗುಜರಿ ವ್ಯಾಪಾರ | 50,000 |
| 15 | ಗಾಣದ ಕೆಲಸ/ಎಣ್ಣೆ ತಯಾರಿಕೆ/ ಹಿಟ್ಟಿನ ಗಿರಣಿ/ | 50,000 |
| 16 | ಸಿಲ್ಕ್ ರೀಲಿಂಗ್/ಸಿಲ್ಕ್ ಟ್ವಿಸ್ಟಿಂಗ್/ರೇಷ್ಮೆ ಹುರಿ ಮಿಷನ್/ನೂಲಿನ ವ್ಯಾಪಾರ/ ಕೈಮಗ್ಗ/ನಾರಿನ ಹಗ್ಗ ತಯಾರಿಕೆ/ ನಿಟ್ಟಿಂಗ್ ಕೆಲಸ | 50,000 |
| 17 | ಸಣ್ಣ ವ್ಯಾಪಾರ/ಸೀರೆ ವ್ಯಾಪಾರ | 25,000 |
| 18 | ಕ್ಲಿನಿಕ್/ಔಷದಿ ಅಂಗಡಿ/ಫೋಟೋ ಸ್ಟುಡಿಯೋ/ ಡಿ.ಟಿ.ಪಿ ಸೆಂಟರ್/ಸೈಬರ್ ಸೆಂಟರ್/ಜೆರಾಕ್ಸ್ ಅಂಗಡಿ/ಕೇಬಲ್ ಕಂಟ್ರೋಲ್/ಹಾರ್ಡ್‌ವೇರ್ ಅಂಗಡಿ | 50,000 |

**ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಸೌಲಭ್ಯ ಪಡೆಯಲು ಆಯಾ ಯೋಜನೆಗನುಸಾರವಾಗಿ ಸಲ್ಲಿಸಬೇಕಾದ ದಾಖಲಾತಿಗಳು.**

**i. ಸಾಲ ಮಂಜೂರಾತಿ ಪೂರ್ವ ಸಲ್ಲಿಸಬೇಕಾದ ದಾಖಲೆಗಳು:**

1. ಆಯಾ ಯೋಜನೆಗೆ ನಿಗದಿ ಪಡಿಸಿದ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿ ನಮೂನೆ.
2. ಜಾತಿ ಮತ್ತು ಆದಾಯ ಪ್ರಮಾಣ ಪತ್ರ. (5 ವರ್ಷಗಳ ಅವಧಿ ಒಳಗಿರಬೇಕು, ನಕಲು ಪ್ರತಿ ಲಗತ್ತಿಸಬೇಕು.)
3. ವಿಳಾಸ ದೃಢೀಕರಣಕ್ಕೆ ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ/ಕೆ.ಪಿ.ಟಿ.ಸಿ.ಎಲ್. ಆರ್.ಆರ್. ನಂ. ಇರುವ ಬಿಲ್ಲಿನ ಜೆರಾಕ್ಸ್ ಪ್ರತಿ/ಆಧಾರ ಕಾರ್ಡ್‌ನ ಜೆರಾಕ್ಸ್ ಪ್ರತಿ.
4. ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳು.
5. ಘಟಕಗಳಿಗೆ ಅಗತ್ಯವಿದ್ದಲ್ಲಿ ಗ್ರಾಮ ಪಂಚಾಯಿತಿ/ಪಟ್ಟಣ ಪಂಚಾಯಿತಿಗಳಿಂದ ಲೈಸೆನ್ಸ್/ ಪರವಾನಗಿ ಪತ್ರ.
6. ಸಾರಿಗೆ ವಲಯದಲ್ಲಿ ಸಾಲ ಪಡೆಯಲು ಡ್ರೈವಿಂಗ್ ಲೈಸೆನ್ಸ್.(ಜೆರಾಕ್ಸ್ ಪ್ರತಿ)

7. ರೂ.1,00,000/–ಗಳಿಗಿಂತ ಹೆಚ್ಚಿನ ಸಾಲದ ಭದ್ರತೆಗೆ ನಿಗಮಕ್ಕೆ ಸ್ಥಿರಾಸ್ತಿಯನ್ನು ಆಧಾರ ಮಾಡಬೇಕು. ಅರ್ಜಿದಾರರು ಅಥವಾ ಜಾಮೀನುದಾರರು ಹೊಂದಿರುವ ಸ್ಥಿರಾಸ್ತಿಯ ದಾಖಲಾತಿಗಳಾದ, ಮೂಲ ಕ್ರಯ ಪತ್ರ, 3 ವರ್ಷಗಳ ಪಹಣಿ, ಖಾತಾ ಉದ್ಧರಣೆ, 13 ವರ್ಷಗಳ ಋಣಭಾರ ರಾಹಿತ್ಯ ಪ್ರಮಾಣ ಪತ್ರ, ಸ್ಥಿರಾಸ್ತಿ ಮೌಲ್ಯ ನಿರ್ಣಯ ಪತ್ರ, ಕಂದಾಯ ಪಾವತಿ ರಶೀದಿ ಇತ್ಯಾದಿ.
8. ರಾಷ್ಟ್ರೀಕೃತ/ಷೆಡ್ಯೂಲ್/ಗ್ರಾಮೀಣ ಬ್ಯಾಂಕ್‌ನಲ್ಲಿ ಫಲಾನುಭವಿಯು ಹೊಂದಿರುವ ಬ್ಯಾಂಕ್ ಖಾತಾ ಸಂಖ್ಯೆ, ಐ.ಎಫ್.ಎಸ್.ಸಿ. ಕೋಡ್ ಹೊಂದಿದ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ.
9. ಶೈಕ್ಷಣಿಕ ಸಾಲ ಯೋಜನೆಗೆ ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ವ್ಯಾಸಂಗದ ದೃಢೀಕರಣ ಪತ್ರ.
10. ವಿದ್ಯಾರ್ಥಿ ಮೆರಿಟ್ ಆಧಾರದ ಮೇಲೆ ಸೀಟು ಪಡೆದಿರುವ ಬಗ್ಗೆ ಸಿ.ಇ.ಟಿ.ಯವರು ನೀಡಿರುವ ಸೀಟು ಹಂಚಿಕೆ ಪತ್ರ.
11. ಗಂಗಾಕಲ್ಯಾಣ ಯೋಜನೆಯಲ್ಲಿ ನೀರಾವರಿ ಸೌಲಭ್ಯ ಪಡೆಯಲು ಅರ್ಜಿದಾರರು ಸಣ್ಣ ಮತ್ತು ಅತಿಸಣ್ಣ ರೈತರಾಗಿರಬೇಕು. ಈ ಬಗ್ಗೆ ಸಂಬಂಧಿಸಿದ ತಹಶಿಲ್ದಾರ್/ಕಂದಾಯ ಅಧಿಕಾರಿಗಳಿಂದ ಪಡೆದ ದೃಢೀಕೃತ ಪ್ರಮಾಣ ಪತ್ರ.
12. ಗಂಗಾಕಲ್ಯಾಣ ಯೋಜನೆಯಲ್ಲಿ ಏತನೀರಾವರಿ ಯೋಜನೆಗೆ ಭೂಮಟ್ಟದಲ್ಲಿ ದೊರೆಯುವ ನೀರಿನ್ನು ಬಳಸಿಕೊಳ್ಳಲು ಸಂಬಂಧಿಸಿದ ನೀರಾವರಿ ಇಲಾಖೆಯಿಂದ ಅನುಮತಿ ಪತ್ರ.

**ii. ಸಾಲ ಮಂಜೂರಾದ ನಂತರ ಸಲ್ಲಿಸಬೇಕಾದ ದಾಖಲೆಗಳು/ಭದ್ರತಾ ದಾಖಲೆಗಳು:**

1. ಸಾಲ ಮಂಜೂರಾತಿ ಆದೇಶದಲ್ಲಿ ತಿಳಿಸಿರುವಂತೆ ಸಾಲದ ಭದ್ರತಾ ದಾಖಲೆಗಳು. (ಪ್ರೋನೋಟ್, ಲೆಟರ್ ಆಫ್ ರಿಪೇಮೆಂಟ್/ಒಪ್ಪಂದದ ನಿಬಂಧನೆಗಳು, ಲೆಟರ್ ಆಫ್ ಗ್ಯಾರಂಟಿ, ಹೈಪಾಥಿಕೇಶನ್ ಡೀಡ್ ಇತ್ಯಾಧಿ)
2. ಅರ್ಜಿದಾರರು ಮತ್ತು ಜಾಮೀನುದಾರರ ಆಸ್ತಿ ಮತ್ತು ಋಣಭಾರಗಳ ಘೋಷಣೆ.
3. ಬೇಬಾಕಿ ಪತ್ರ.
4. ರೂ.1.00ಲಕ್ಷಗಳಿಗಿಂತ ಹೆಚ್ಚಿನ ಸಾಲಕ್ಕೆ ಅರ್ಜಿದಾರರು/ಜಾಮೀನುದಾರರು ನೀಡುವ ಸ್ಥಿರಾಸ್ತಿಯ ಕಂದಾಯ ದಾಖಲೆಗಳು.

## ವಿಶೇಷ ಸೂಚನೆ:

1. **ಅರ್ಜಿಯೊಂದಿಗೆ ಕೆ.ವೈ.ಸಿ. ದಾಖಲೆಗಳಾದ ಆಧಾರ್‌ಕಾರ್ಡ್/ಚುನಾವಣಾ ಗುರುತಿನ ಚೀಟಿ/ಪಾನ್ ಕಾರ್ಡ್ ಈ ದಾಖಲೆಗಳಲ್ಲಿ ಯಾವುದಾದರೊಂದು ದಾಖಲೆ ನೀಡಬೇಕು. ನೀಡಿರುವ ದಾಖಲೆಯ ಸಂಖ್ಯೆ ಅರ್ಜಿಯಲ್ಲಿ ನಮೂದಿಸಬೇಕು.**
2. **ಈ ಸಂಖ್ಯೆಯನ್ನು ಆಯಾ ಜಿಲ್ಲಾ ವ್ಯವಸ್ಥಾಪಕರು ಆಯ್ಕೆ ಸಮಿತಿ ಮುಂದೆ ಮಂಡಿಸುವಾಗ ಕಡ್ಡಾಯವಾಗಿ ಪ್ರಸ್ತಾವನೆಯಲ್ಲಿ ನಮೂದಿಸಬೇಕು. ಕೇಂದ್ರ ಕಛೇರಿ/ವಿಭಾಗ ಕಛೇರಿಗಳಲ್ಲಿ ಸಾಲ ಮಂಜೂರಾತಿ ಆದೇಶ ಪತ್ರದಲ್ಲಿಯೂ ಕೆ.ವೈ.ಸಿ. ದಾಖಲೆಯ ಸಂಖ್ಯೆ ನಮೂದಿಸುವುದು ಕಡ್ಡಾಯವಾಗಿರುತ್ತದೆ.**

# ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆ ಮತ್ತು ಮಂಜೂರಾತಿ ವಿಧಾನ

ಸರ್ಕಾರದ ಆದೇಶ ಸಂಖ್ಯೆ: ಸಕಇ 162 ಎಸ್‌ಡಿಸಿ 2015(ಭಾ), ಬೆಂಗಳೂರು, ದಿನಾಂಕ: 04/07/2016ರ, ಆದೇಶದನ್ವಯ ನಿಗಮವು ಅನುಷ್ಠಾನಗೊಳಿಸುತ್ತಿರುವ ಸಾಲದ ಯೋಜನೆಗಳ ಮತ್ತು ಗಂಗಾಕಲ್ಯಾಣ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ.

| | | |
|---|---|---|
| 1 | ವಿಧಾನ ಸಭಾ ಕ್ಷೇತ್ರ ಶಾಸಕರು | ಅಧ್ಯಕ್ಷರು. |
| 2 | ತಾಲ್ಲೂಕಿನಲ್ಲಿ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಸದಸ್ಯರು. | ಉಪಾಧ್ಯಕ್ಷರು. |
| 3 | ಆಯಾ ಲೋಕಸಭಾ ಕ್ಷೇತ್ರದ ಸದಸ್ಯರು | ಸದಸ್ಯರು. |
| 4 | ಆಯಾ ರಾಜ್ಯಸಭಾ ಕ್ಷೇತ್ರದಲ್ಲಿ ಖಾಯಂ ಆಗಿ ವಾಸಿಸುವಂತಹ ರಾಜ್ಯ ಸಭಾ ಸದಸ್ಯರು | ಸದಸ್ಯರು. |
| 5 | ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ | ಸದಸ್ಯರು. |
| 6 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ | ಸದಸ್ಯರು. |
| 7 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ | ಸದಸ್ಯರು. |
| 8 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ) | ಸದಸ್ಯರು. |
| 9 | ತಾಲ್ಲೂಕು ಸಹಾಯಕ ನಿರ್ದೇಶಕರು, ಕೈಗಾರಿಕಾ ಇಲಾಖೆ. | ಸದಸ್ಯರು. |
| 10 | ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರರು | ಸದಸ್ಯರು. |
| 11 | ತಾಲ್ಲೂಕಿನ ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು. |
| 12 | ತಾಲ್ಲೂಕಿನ ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು. |
| 13 | ಸಂಬಂಧಿಸಿದ ಜಿಲ್ಲೆಯ ಅರಣ್ಯಾಧಿಕಾರಿ | ಸದಸ್ಯರು. |
| 14 | ಹಿಂದುಳಿದ ವರ್ಗಗಳ ಇಲಾಖೆಯ ನಿರೀಕ್ಷಕರು. | ಸದಸ್ಯರು. |
| 15 | ನಿಗಮದ ಜಿಲ್ಲಾ ವ್ಯವಸ್ಥಾಪಕರು, | ಸದಸ್ಯ ಕಾರ್ಯದರ್ಶಿಗಳು |

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಚೈತನ್ಯ ಸಬ್ಸಿಡಿ ಯೋಜನೆ, ಅರಿವು–ಶೈಕ್ಷಣಿಕ ಸಾಲ ಯೋಜನೆ ಮತ್ತು ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಲು **ಸರ್ಕಾರದ ಆದೇಶ ಸಂಖ್ಯೆ: ಹಿಂವಕ 31 ಸಮನ್ವಯ 2013, ಬೆಂಗಳೂರು, ದಿನಾಂಕ: 25/02/2013ರ ಆದೇಶದಲ್ಲಿ** ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಗಿದೆ.

| ಕ್ರ. ಸಂ. | ಅಧಿಕಾರಿಗಳು | ಪದನಾಮ |
|---|---|---|
| 1 | ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, | ಅಧ್ಯಕ್ಷರು. |
| 2 | ಲೀಡ್ ಬ್ಯಾಂಕ್ ವ್ಯವಸ್ಥಾಪಕರು | ಸದಸ್ಯರು |
| 3 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಸದಸ್ಯರು |
| 4 | ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. | ಸದಸ್ಯರು |
| 5 | ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಕೈಗಾರಿಕಾ ಕೇಂದ್ರ | ಸದಸ್ಯರು |
| 6 | ಸಹಕಾರ ಸಂಘಗಳ ಉಪ ನಿಬಂಧಕರು. | ಸದಸ್ಯರು |
| 7 | ಜನರಲ್ ಮ್ಯಾನೇಜರ್ (ಸೂಪರಿಂಟೆಂಡೆಂಟ್ ಇಂಜಿನಿಯರ್) ವಿದ್ಯುತ್ ಸರಬರಾಜು ಕಂಪನಿ | ಸದಸ್ಯರು |
| 8 | ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | ಸದಸ್ಯ ಕಾರ್ಯದರ್ಶಿ |

ಸರ್ಕಾರದ ಆದೇಶ ಸಂಖ್ಯೆ: ಸಕಇ 36 ಬಿಸಿಎ 2012, ದಿನಾಂಕ: 12/04/2012ರಲ್ಲಿ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯ ಅಡಿಯಲ್ಲಿ ಬರುವ ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಪರಿಶಿಷ್ಠ ಪಂಗಡಗಳ ಅಭಿವೃದ್ಧಿ ನಿಗಮ ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಯೋಜನೆಗಳ ಫಲಾನುಭವಿಗಳ ಆಯ್ಕೆ ಹಾಗೂ ಮರುಪಾವತಿ ಬಗ್ಗೆ ಆಯ್ಕೆ ಸಮಿತಿಯು ಅನುಸರಿಸಬೇಕಾದ ಮಾರ್ಗಸೂಚಿಗಳು:

## ಆಯ್ಕೆಯ ವಿಧಾನ ಮತ್ತು ಮಾರ್ಗಸೂಚಿಗಳು:

**ಸರ್ಕಾರದ ಆದೇಶ ಸಂಖ್ಯೆ: ಸಕಇ 36 ಬಿಸಿಎ 2012, ದಿನಾಂಕ: 12/04/2012ರಲ್ಲಿ ನಿಗಮಗಳ ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿಯು ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲು ತಿಳಿಸಲಾಗಿರುತ್ತದೆ.**

1. ಆಯಾ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಆಯವ್ಯಯವನ್ನು ಅವಲಂಭಿಸಿ ವಿಧಾನಸಭಾ ಕ್ಷೇತ್ರವಾರು ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗಧಿಪಡಿಸಿ ಮೇ/ಜೂನ್ ತಿಂಗಳಲ್ಲಿಯೇ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ತಿಳಿಸತಕ್ಕದ್ದು.
2. ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದಂತೆ, (ಗಂಗಾ ಕಲ್ಯಾಣ ಯೋಜನೆಯನ್ನು ಸೇರಿಸಿ) ಆಯಾ ನಿಗಮಗಳ ಜಿಲ್ಲಾ ವ್ಯವಸ್ಥಾಪಕರುಗಳು ವರ್ಷದ ಮೇ/ಜೂನ್ ತಿಂಗಳಗಳಲ್ಲಿ ಪತ್ರಿಕಾ ಪ್ರಕಟಣೆಗಳ ಮುಖಾಂತರ ಮತ್ತು ಕರಪತ್ರಗಳ ಮುಖಾಂತರ ವಿವಿಧ ಚಟುವಟಿಕೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವುದು.
3. ವಿವಿಧ ಯೋಜನೆಗಳಿಗೆ ಅರ್ಜಿಗಳನ್ನು ಮುದ್ರಿಸಿ ಫಲಾನುಭವಿಗಳಿಗೆ ಲಭ್ಯವಾಗುವಂತೆ ವ್ಯವಸ್ಥೆ ಮಾಡತಕ್ಕದ್ದು.

4. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವನ್ನು 12/07/2019ನೇ ತಾರೀಖು ಎಂದು ನಿಗದಿಪಡಿಸಿದೆ. ಕೊನೆಯ ತಾರೀಖಿನ ನಂತರ ಬಂದ ಅರ್ಜಿಗಳನ್ನು ಪರಿಗಣಿಸತಕ್ಕದ್ದಲ್ಲ.

5. ಆಯಾ ದಿನ ಬಂದ ಅರ್ಜಿಗಳನ್ನು ಆಯಾ ದಿನವೇ ಜಿಲ್ಲಾ ವ್ಯವಸ್ಥಾಪಕರುಗಳು ಕ್ರಮ ಸಂಖ್ಯೆ ನೀಡಿ ತಾಲ್ಲೂಕುವಾರು/ಕ್ಷೇತ್ರವಾರು ಕಂಪ್ಯೂಟರ್‌ನಲ್ಲಿ ಅರ್ಜಿದಾರರ ಹೆಸರುಗಳನ್ನು ನಮೂದಿಸುವುದು.

6. ಬಂದಿರುವ ಅರ್ಜಿಗಳನ್ನು ಆಯಾ ಯೋಜನೆಗಳಿಗೆ ನಿಗಧಿಪಡಿಸಿದ ಅರ್ಹತೆಗಳನ್ನು ಹೊಂದಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಪರಿಶೀಲಿಸಿ ಅರ್ಹತೆ ಹೊಂದಿರುವವರ ಪಟ್ಟಿಯನ್ನು ತಯಾರಿಸಿ ಕಂಪ್ಯೂಟರೀಕರಣ ಮಾಡುವುದು. ಅನರ್ಹರಾಗಿರುವ ಅರ್ಜಿಗಳನ್ನು ಸಹ ಪಟ್ಟಿ ಮಾಡುವುದು.

7. ಜಿಲ್ಲಾ ವ್ಯವಸ್ಥಾಪಕರು ಆಯ್ಕೆ ಸಮಿತಿಯ ಅಧ್ಯಕ್ಷರಿಗೆ ಪತ್ರ ಬರೆದು, ಆಯ್ಕೆ ಸಮಿತಿಯನ್ನು **ಆಗಸ್ಟ್ ಮಾಹೆಯೊಳಗೆ ಆಯ್ಕೆ ಸಮಿತಿ ಸಭೆ ನಡೆಸಿ, ಫಲಾನುಭವಿಗಳನ್ನು ಆಯ್ಕೆ ಮಾಡುವುದು.** ಆಯ್ಕೆ ಸಮಿತಿ ಸಭೆಯನ್ನು ಸರ್ಕಾರದ ಕಛೇರಿ/ಸ್ಥಳಗಳಲ್ಲಿ ಮಾತ್ರ ನಡೆಸತಕ್ಕದ್ದು.

8. ಅರ್ಹ ಅರ್ಜಿದಾರರ ಪಟ್ಟಿಯನ್ನು ಮತ್ತು ಅನರ್ಹ ಅರ್ಜಿಗಳ ಪಟ್ಟಿಯನ್ನು ಆಯ್ಕೆ ಸಮಿತಿ ಮುಂದೆ ಮಂಡಿಸಿ, ಆಯಾ ಕ್ಷೇತ್ರಕ್ಕೆ ನಿಗದಿಪಡಿಸಿದ ಭೌತಿಕ ಮತ್ತು ಆರ್ಥಿಕ ಗುರಿಯಂತೆ ಅರ್ಹ ಅರ್ಜಿದಾರರನ್ನು ಆಯ್ಕೆ ಮಾಡಬೇಕು. ಹಾಗೂ ಶೇ.10ರಷ್ಟು ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆ ಮಾಡಬೇಕು. ಅರ್ಜಿ ಸಲ್ಲಿಸಿರುವ ಎಲ್ಲಾ ಅರ್ಜಿದಾರರನ್ನು ಆಯ್ಕೆ ಮಾಡಿದಲ್ಲಿ ಅಥವಾ ಅರ್ಜಿ ಹಾಕದೆ/ಸಲ್ಲಿಸದೆ ಇರುವವರನ್ನು ಆಯ್ಕೆ ಮಾಡಿದಲ್ಲಿ ಅಂತಹ ಆಯ್ಕೆ ಕ್ರಮಬದ್ಧವಾಗಿರುವುದಿಲ್ಲ. ಈ ಆಯ್ಕೆಯನ್ನು ಮಂಜೂರಾತಿಗೆ ಪರಿಗಣಿಸಬಾರದು. **ಅನರ್ಹ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡತಕ್ಕದ್ದು.** ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಂದ ಫಲಾನುಭವಿಗಳ ಆಯ್ಕೆಯನ್ನು **ಆಗಸ್ಟ್-2019** ರೊಳಗೆ ಪೂರ್ಣಗೊಳಿಸಬೇಕು.

**9.** ***ಆಗಸ್ಟ್-2019ರ ಅಂತ್ಯದೊಳಗೆ ಸದರಿ ಸಮಿತಿಗಳು ಆಯ್ಕೆ ಮಾಡದೇ ಇದ್ದಲ್ಲಿ, ಅದನ್ನು ಸರ್ಕಾರಕ್ಕೆ ತಿಳಿಸತಕ್ಕದ್ದು ಮತ್ತು ಮುಂದಿನ ಕ್ರಮದ ಬಗ್ಗೆ ಸರ್ಕಾರದ ಮಟ್ಟದಲ್ಲಿ ಕ್ರಮ ಜರುಗಿಸಲಾಗುವುದು.***

10. ಬ್ಯಾಂಕಿನ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವ ಚೈತನ್ಯ ಸಹಾಯಧನ ಯೋಜನೆಯಲ್ಲಿ ನಿಗದಿಪಡಿಸಿದ ಜಿಲ್ಲಾವಾರು/ಕ್ಷೇತ್ರವಾರು ಗುರಿಯನ್ನು ಆಯಾ ಜಿಲ್ಲೆಯ ಲೀಡ್ ಬ್ಯಾಂಕ್ ಮೂಲಕ ಜಿಲ್ಲಾ ಸಮನ್ವಯ ಸಮಿತಿ ಸಭೆಯಲ್ಲಿ ಮಂಡಿಸಿ ಬ್ಯಾಂಕ್‌ವಾರು/ಶಾಖಾವಾರು ಗುರಿಯನ್ನು ನಿಗದಿಪಡಿಸಬೇಕು. ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿ ಸಭೆಯನ್ನು **ಆಗಸ್ಟ್** ಮಾಹೆಯಲ್ಲಿ ಏರ್ಪಡಿಸಿ ಗುರಿಯನ್ನು ಸಮಿತಿ ಸಭೆಯ ಗಮನಕ್ಕೆ ತರುವುದು. ಹಾಗೂ ಲೀಡ್ ಬ್ಯಾಂಕ್ ಮೂಲಕ ಬ್ಯಾಂಕ್‌ವಾರು/ಶಾಖಾವಾರು ಗುರಿ ನಿಗದಿಪಡಿಸಿ, ನಿಗದಿಪಡಿಸಿದ ಗುರಿಯಂತೆ ಅರ್ಜಿಗಳನ್ನು 1:1.25ರ ಅನುಪಾತದಲ್ಲಿ ಶಿಫಾರಸ್ಸು ಮಾಡುವ ಬಗ್ಗೆ ಸಮಿತಿಯ ಅನುಮೋದನೆ ಪಡೆಯುವುದು. ಜಿಲ್ಲಾಮಟ್ಟದ ಆಯ್ಕೆ ಸಮಿತಿಯಲ್ಲಿ ಅನುಮೋದನೆ ಪಡೆದ ಫಲಾನುಭವಿಗಳ ಅರ್ಜಿಗಳನ್ನು ವಾಣಿಜ್ಯ ಬ್ಯಾಂಕ್‌ಗಳಿಗೆ ಮತ್ತು ಆರ್.ಆರ್.ಬಿ.ಗಳಿಗೆ ಸಾಲ ಮಂಜೂರಾತಿಗಾಗಿ ತಕ್ಷಣವೇ ಕಳುಹಿಸುವುದು. ಸಂಬಂಧಿಸಿದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಡಿ.ಎಲ್.ಬಿ.ಸಿ./ಬಿ.ಎಲ್.ಬಿ.ಸಿ. ಬ್ಯಾಂಕ್‌ಗಳ ಸಭೆಗಳಲ್ಲಿ ತಪ್ಪದೇ ಭಾಗವಹಿಸಿ ಅರ್ಜಿಗಳಿಗೆ ಮಂಜೂರಾತಿ ಪಡೆಯಲು ಕ್ರಮವಹಿಸತಕ್ಕದ್ದು.

11. ಸೌಲಭ್ಯ ಕೋರಿ ಬರುವ ಅರ್ಜಿದಾರರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಎಲ್ಲಾ ಉಪಜಾತಿಗಳಿಗೂ ಪ್ರಾತಿನಿಧ್ಯತೆ ನೀಡುವುದು. ವಿಶೇಷವಾಗಿ ಅತೀ ಹಿಂದುಳಿದ ಸಮುದಾಯಗಳಿಗೆ ಆದ್ಯತೆ ನೀಡಬೇಕು.

12. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಸರ್ಕಾರದ ಆದೇಶ ಸಂಖ್ಯೆ: ಸಕಇ/573/ಬಿಸಿಎ/1995, ದಿನಾಂಕ:23/02/1996ರಲ್ಲಿ ನಿಗಧಿಪಡಿಸಿರುವ ಮೀಸಲಾತಿಯಂತೆ ಪ್ರವರ್ಗ 1 ಮತ್ತು 2ಎಗೆ ಶೇಕಡ 70ರಷ್ಟು ಹಾಗೂ ಪ್ರವರ್ಗ 3ಎ ಮತ್ತು 3ಬಿಗೆ ಶೇಕಡ 30ರಷ್ಟು ಆಯ್ಕೆ ಮಾಡತಕ್ಕದ್ದು. ಪ್ರವರ್ಗ1 ಮತ್ತು 2ಎನಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಹಿಂದುಳಿದ ವರ್ಗಗಳಲ್ಲಿ ಅತ್ಯಂತ ಹಿಂದುಳಿದ ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ಹಾಗೂ ಇತರೆ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಹಾಗೂ ಈವರೆವಿಗೂ ನಿಗಮದಿಂದ ಸೌಲಭ್ಯವನ್ನು ಪಡೆಯದೇ ಇರುವ ಜಾತಿಗಳಿಗೆ ಆದ್ಯತೆ ನೀಡುವುದು.

13. **ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಶೇಕಡ 33ರಷ್ಟು ಮಹಿಳೆಯರಿಗೆ ಮತ್ತು ಶೇಕಡಾ 5ರಷ್ಟು ಅಂಗವಿಕಲರಿಗೆ ಅದರಲ್ಲಿ ಕಡ್ಡಾಯವಾಗಿ ಶೇ. 2.5ರಷ್ಟು ಮಹಿಳಾ ಅಂಗವಿಕಲರಿಗೆ ಆಯ್ಕೆ ಮಾಡುವುದು.**

**14.** ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳನ್ನು ಅಂತರ್ಜಲ ಲಭ್ಯವಿರುವ ಪ್ರದೇಶಗಳಿಗೆ ಮತ್ತು ಶಾಶ್ವತ ನೀರಾವರಿ ಇಲ್ಲದ ಪ್ರದೇಶಗಳಿಗೆ ಆದ್ಯತೆ ನೀಡುವುದು. ಅಂತರ್ಜಲ ಕುಸಿದು ಆಳದ ಮಟ್ಟಕ್ಕೆ ಹೋಗಿದ್ದ ಪ್ರದೇಶಗಳಲ್ಲಿ **(Red areas/Over Exploited)** **ಇತರೆ ಸ್ವಯಂ ಉದ್ಯೋಗ ಯೋಜನೆಗಳಲ್ಲಿ ಹೆಚ್ಚಿನ ಆದ್ಯತೆ ನೀಡುವುದು.**

15. ಆಯ್ಕೆ ಸಮಿತಿಯು ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಆಯಾ ಯೋಜನೆಗಳಲ್ಲಿ ಸರ್ಕಾರವು/ನಿಗಮಗಳು ಆಗಿಂದಾಗ್ಗೆ ಹೊರಡಿಸಿರುವ **ಆದೇಶ ಮತ್ತು ಮಾರ್ಗಸೂಚಿಗಳ ಪ್ರಕಾರವೇ ಆಯ್ಕೆ ಮಾಡುವುದು. ಜಿಲ್ಲಾ ವ್ಯವಸ್ಥಾಪಕರುಗಳು ಮಾರ್ಗಸೂಚಿಗಳನ್ನು ಆಯ್ಕೆ ಸಭೆಯ ಗಮನಕ್ಕೆ ತಂದು ಓದಿ ನಡವಳಿಗಳಲ್ಲಿ ದಾಖಲಿಸುವುದು.**

16. ಆಯಾ ಕಾರ್ಯಕ್ರಮಗಳ ಮಾರ್ಗಸೂಚಿಗಳನ್ವಯ ನಿಗದಿಪಡಿಸಿದ ದಾಖಲೆಗಳನ್ನು ಒದಗಿಸಿರುವ ಫಲಾನುಭವಿಗಳ ಅರ್ಹತೆ ಪರಿಶೀಲಿಸಿ ಆಯ್ಕೆ ಸಮಿತಿಯ ಮುಂದೆ ಮಂಡಿಸಿ ಆಯ್ಕೆಗೆ ಕ್ರಮ ವಹಿಸಬೇಕು. ***ಅರ್ಜಿಗಳನ್ನು ಸಲ್ಲಿಸದೇ ಇರುವ ಮತ್ತು ದಾಖಲೆಗಳನ್ನು ಸಲ್ಲಿಸದೇ ಇರುವ ಅರ್ಜಿದಾರರನ್ನು ಆಯ್ಕೆಗೆ ಪರಿಗಣಿಸಬಾರದು.*** ಸಮಿತಿಯಿಂದ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಸಾಲ ಸೌಲಭ್ಯವನ್ನು ಮಂಜೂರು ಮಾಡುವ ಮೊದಲು ಮಂಜೂರಾತಿ ಅಧಿಕಾರಿಗಳು ಆಯಾ ಯೋಜನೆಗಳಲ್ಲಿ ನಿಗದಿಪಡಿಸಿರುವ ದಾಖಲೆಗಳನ್ನು ಒದಗಿಸದೆ ಇದ್ದಲ್ಲಿ ಅವುಗಳನ್ನು ಒಂದು ವಾರದೊಳಗಾಗಿ ಒದಗಿಸುವಂತೆ ಪತ್ರ ಕಳುಹಿಸಿ ಅಗತ್ಯ ದಾಖಲೆಗಳನ್ನು ಪಡೆಯುವುದು. ಒಂದು ವೇಳೆ ದಾಖಲೆಗಳನ್ನು ಒದಗಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಬಾರದು. ಸಾಲ ಮಂಜೂರು ಮಾಡಿದ ನಂತರ ಫಲಾನುಭವಿಯ ಹೆಸರು ಮತ್ತು ಅವರು ಹೊಂದಿರುವ ಬ್ಯಾಂಕ್ ಖಾತೆ ಸಂಖ್ಯೆ ಸೇರಿಸಿ ಆರ್.ಟಿ.ಜಿ.ಎಸ್/ಕ್ರಾಸ್ಡ್ ಚೆಕ್ ಅನ್ನು ರಚಿಸಿ ಬಿಡುಗಡೆ ಮಾಡುವುದು. ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸಿಕೊಂಡು ಘಟಕ ಸ್ಥಾಪಿಸಿ ನಿರ್ವಹಿಸಲು ಫಲಾನುಭವಿಗೆ ತಿಳಿಸತಕ್ಕದ್ದು.

17. ಸಾಲ ಸೌಲಭ್ಯ ಬ್ಯಾಂಕ್‌ಗಳಿಂದ ಮಂಜೂರು ಮಾಡಿದ್ದಲ್ಲಿ ಸಹಾಯಧನವನ್ನು ಬ್ಯಾಂಕ್ ಮುಖಾಂತರ ಸಾಲದ ಜೊತೆಗೆ ಫಲಾನುಭವಿಗಳಿಗೆ ಬ್ಯಾಂಕ್‌ಗಳು ವಿತರಿಸಬೇಕು. ಒಂದು ವೇಳೆ ಬ್ಯಾಂಕ್‌ಗಳು ಮಂಜೂರಾದ ಸಾಲದ ಮೊತ್ತವನ್ನು ವಿತರಿಸದೆ **ಸಹಾಯಧನದ ಮೊತ್ತವನ್ನು ಮಾತ್ರ ವಿತರಣೆ ಮಾಡಿದ್ದಲ್ಲಿ ಅಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ ನಿಗಮದ ಕೇಂದ್ರ ಕಛೇರಿಗೆ ವರದಿ ಮಾಡಬೇಕು** ಹಾಗೂ ಬಿ.ಎಲ್.ಬಿ.ಸಿ. ಸಭೆಯ ಗಮನಕ್ಕೆ ಕಡ್ಡಾಯವಾಗಿ ತರಬೇಕು.

18. ಸಾಲ ಪಡೆದ ಫಲಾನುಭವಿಗಳು ಸಾಲವನ್ನು ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ 3ನೇ ಪಾರ್ಟಿಯಿಂದ ತನಿಖೆ ಮಾಡಿಸಿ ವರದಿ ಪಡೆಯತಕ್ಕದ್ದು. ದುರುಪಯೋಗ ಮಾಡಿರುವ ಪ್ರಕರಣಗಳನ್ನು ಪತ್ತೆ ಮಾಡಿ ಕಾನೂನು ಪ್ರಕಾರ ಕ್ರಮ ಜರುಗಿಸುವುದು.

**19.** ***ಆಯ್ಕೆ ಸಮಿತಿಗಳು ಫಲಾನುಭವಿಗಳನ್ನು ಆಯ್ಕೆ ಮಾಡಿದ ನಂತರ ನಿಗಮದಿಂದ ಸಾಲ/ಸಹಾಯಧನ ಮಂಜೂರು ಮಾಡಿದ ಪ್ರಗತಿ ಬಗ್ಗೆ, ಸಾಲ ಪಡೆದ ಫಲಾನುಭವಿಗಳು ಸಾಲವನ್ನು ಸದುಪಯೋಗಪಡಿಸಿಕೊಂಡಿರುವ ಬಗ್ಗೆ ಹಾಗೂ ಸಾಲ ಮರುಪಾವತಿ ಮಾಡುತ್ತಿರುವ ಬಗ್ಗೆ ಆಯ್ಕೆ ಸಮಿತಿಯು ವರ್ಷದಲ್ಲಿ ಕನಿಷ್ಠ 2 ಬಾರಿ ಸಭೆ ಸೇರಿ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸುವುದು.***

20. ಮಂಜೂರಾದ ಸಾಲದ ಸದುಪಯೋಗದ ಬಗ್ಗೆ ಮರುಪಾವತಿ ಬಗ್ಗೆ ಮತ್ತು ಒದಗಿಸುವ ದಾಖಲಾತಿಗಳ ಬಗ್ಗೆ ತಿಳುವಳಿಕೆ ಮೂಡಿಸಲು ಸಾಲ ಮಂಜೂರಾತಿ ಪೂರ್ವ ಸಮಾಲೊಚನೆ ಸಭೆಗಳನ್ನು (Pre Disbursement Counselling) ಏರ್ಪಡಿಸಬೇಕು.

21. ಸಾಲ ಮರುಪಾವತಿ ಮಾಡುವ ಬಗ್ಗೆ ಸೂಕ್ತ ಸಮಯದಲ್ಲಿ ನೋಟೀಸ್‌ಗಳನ್ನು ನೀಡಿ ಮರುಪಾವತಿ ಸಂಗ್ರಹ ಕಾರ್ಯಕ್ರಮಗಳನ್ನು ನಡೆಸಿ ಹೆಚ್ಚಿನ ಮೊತ್ತದಲ್ಲಿ ವಸೂಲು ಮಾಡಲು ಕ್ರಮ ತೆಗೆದುಕೊಳ್ಳುವುದು.

## ನಿಗಮದಿಂದ ಮಂಜೂರು ಮಾಡಿದ ಸಾಲದ ಭದ್ರತೆಗೆ ಪಡೆಯಬೇಕಾದ ಭದ್ರತಾ ದಾಖಲಾತಿಗಳು

ದಿ:07/03/2003ರ ನಿಗಮದ ಸುತ್ತೋಲೆ ಸಂ:ಕಹಿನಿ/ವ್ಯ/ಸಿಆರ್-100/2002-03ರನ್ವಯ ನಿಗದಿತ ಮೊತ್ತಗಳಿಗೆ ನಿಗದಿಪಡಿಸಿದ ದಸ್ತಾವೇಜುಗಳನ್ನು ಈ ಕೆಳಕಂಡಂತೆ ಪಡೆಯುವುದು.

1) ಪ್ರಾಮಿಸರಿ ನೋಟ್
2) ಲೆಟರ್ ಆಫ್ ರೀಪೆಮೆಂಟ್/ – ಫಲಾನುಭವಿಯಿಂದ
3) ಒಪ್ಪಂದದ ನಿಬಂಧನೆಗಳು
4) ಹೈಪಾಥಿಕೇಷನ್ ಡೀಡ್
5) ಲೆಟರ್ ಆಫ್ ಗ್ಯಾರಂಟಿ – ಜಾಮೀನುದಾರರಿಂದ
6) ಮೆಮೊರೆಂಡಮ್ ಆಫ್ ಅಗ್ರಿಮೆಂಟ್ – ಸ್ವಸಹಾಯ ಗುಂಪುಗಳಿಂದ
7) ಸಹಾಯಧನ ವಿತರಣೆ ಪ್ರಮಾಣ ಪತ್ರ.
8) ಸಹಾಯಧನ ಬಳಕೆ ಬಗ್ಗೆ ಸಾಲ ಪಡೆದವರಿಂದ ಘೋಷಣೆ.
9) ರೂ.1,00,000/-ಗಳಿಗಿಂತ ಹೆಚ್ಚಿನ ಸಾಲಕ್ಕೆ ಸ್ಥಿರಾಸ್ತಿ ಆಧಾರ ಮಾಡಿದ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಿದ(Registered) ದಾಖಲೆಗಳು.

<u>ವಿಮೆ</u>

ನಿಗಮದ ಯೋಜನೆಗಳ ಸಾಲದಿಂದ ಉತ್ಪನ್ನವಾದ ಘಟಕ/ಆಸ್ತಿಯನ್ನು ಬೆಂಕಿ, ನೀರು, ಭೂಕಂಪ, ಕಳ್ಳತನ ಇತ್ಯಾದಿ ಪ್ರಕೋಪಗಳಿಂದ ಆಗುವ ನಷ್ಟವನ್ನು ತಪ್ಪಿಸಲು ಕಡ್ಡಾಯವಾಗಿ ವಿಮೆ ಮಾಡಿಸಬೇಕು. ವಿಮಾ ಪ್ರೀಮಿಯಮ್ ಮೊತ್ತವನ್ನು ಫಲಾನುಭವಿಗಳು ಭರಿಸಬೇಕು.

## 2019–20ನೇ ಸಾಲಿನಲ್ಲಿ ವಿವಿಧ ಸಾಲದ ಯೋಜನೆಗಳ ಅನುಷ್ಠಾನದ ವೇಳಾಪಟ್ಟಿ

| ಕ್ರ. ಸಂ. | ವಿವರ | ವೇಳಾ ಪಟ್ಟಿ |
|---|---|---|
| 1 | ಅರ್ಜಿಗಳ ಆಹ್ವಾನಕ್ಕಾಗಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸುವ ದಿನಾಂಕ. | 03/06/2019 |
| 2 | ಅರ್ಜಿಗಳನ್ನು ವಿತರಿಸಲು ಕೊನೆಯ ದಿನಾಂಕ | 03/07/2019 |
| 3 | ಭರ್ತಿ ಮಾಡಿದ ಅರ್ಜಿಯನ್ನು ಆಯಾ ಜಿಲ್ಲಾ ಕಛೇರಿಗೆ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ | 12/07/2019 |
| 4 | ಅರ್ಜಿಗಳನ್ನು ಆಯ್ಕೆ ಸಮಿತಿ ಮುಂದೆ ಮಂಡನೆ | ಆಗಸ್ಟ್–2019ರ ಮಾಹೆ |
| 5 | ಕೇಂದ್ರ ಕಛೇರಿ/ವಿಭಾಗೀಯ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವಿಕೆ | ಸೆಪ್ಟಂಬರ್–2019ರ ಮಾಹೆ |
| 6 | ಆರ್.ಟಿ.ಜಿ.ಎಸ್./ಹಣ ಬಿಡುಗಡೆ ಮಾಡಲು ಕೊನೆಯ ದಿನಾಂಕ | 31/10/2019 |
| 7 | ಸೌಲಭ್ಯ ವಿತರಿಸಿದ ಒಂದು ತಿಂಗಳ ನಂತರ ಫಲಾನುಭವಿ ಸಾಲದ ಹಣ ಸದುಪಯೋಗ ಪಡಿಸಿಕೊಂಡು ಘಟಕ ಸ್ಥಾಪಿಸಿದ ಬಗ್ಗೆ ಪರಿಶೀಲನೆ ಮಾಡುವುದು. | ನವೆಂಬರ್, ಡಿಸೆಂಬರ್–2019ರ ಮಾಹೆಗಳು. |

## 2019–20ನೇ ಸಾಲಿನಲ್ಲಿ ಗಂಗಾ ಕಲ್ಯಾಣ ನೀರಾವರಿ ಯೋಜನೆಯ ಅನುಷ್ಠಾನದ ವೇಳಾಪಟ್ಟಿ

| ಕ್ರ. ಸಂ. | ವಿವರ | ವೇಳಾ ಪಟ್ಟಿ |
|---|---|---|
| **1** | **2** | **3** |
| 1 | ಅರ್ಜಿಗಳ ಆಹ್ವಾನಕ್ಕಾಗಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸುವ ದಿನಾಂಕ. | 03/06/2019 |
| 2 | ಅರ್ಜಿಗಳನ್ನು ವಿತರಿಸಲು ಕೊನೆಯ ದಿನಾಂಕ: | 03/07/2019 |
| **1** | **2** | **3** |
| 3 | ಭರ್ತಿ ಮಾಡಿದ ಅರ್ಜಿಯನ್ನು ಆಯಾ ಜಿಲ್ಲಾ ಕಛೇರಿಗೆ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ | 12/07/2019 |
| 4 | ಅರ್ಜಿಗಳ ಪರಿಶೀಲನೆ ಹಾಗೂ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಮುಂದೆ ಮಂಡನೆ | ಆಗಸ್ಟ್–2019ರ ಮಾಹೆ |
| 5 | ಅರ್ಹ ಫಲಾನುಭವಿಗಳನ್ನು ಆಯ್ಕೆ ಸಮಿತಿ ಮೂಲಕ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸುವುದು. | ಸೆಪ್ಟಂಬರ್–2019ರ ಮಾಹೆ |
| 6 | ಆಯ್ಕೆ ಸಮಿತಿ ಆಯ್ಕೆ ಮಾಡಿದ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಅನುಮೋದನೆಗೆ ಸಲ್ಲಿಸುವುದು ಹಾಗೂ ಕೇಂದ್ರ ಕಛೇರಿಯಿಂದ ಅನುಮೋದನೆ ನೀಡುವುದು. | ಅಕ್ಟೋಬರ್–2019ರ ಮಾಹೆ |

| | | |
|---|---|---|
| 7 | ಜಿಲ್ಲಾ ಕಛೇರಿಯಿಂದ ಕೊಳವೆ ಬಾವಿ ಕೊರೆಯಲು ಕಾರ್ಯಾದೇಶ ನೀಡುವುದು. | ನವೆಂಬರ್–2019ರ ಮಾಹೆ |
| 8 | ಭೂ ವಿಜ್ಞಾನಿಗಳಿಂದ ಜಲಬಿಂಧು ಗುರುತಿಸುವಿಕೆ ಹಾಗೂ ಕೊಳವೆ ಬಾವಿ ಕೊರೆಯಿಸುವುದು. | ಡಿಸೆಂಬರ್–2019ರ ಮಾಹೆ |
| 9 | ಪಂಪ್‌ಸೆಟ್ ಮತ್ತು ಉಪಕರಣಗಳ ಸರಬರಾಜು ಹಾಗೂ ವಿದ್ಯುದ್ಧೀಕರಣಕ್ಕೆ ಕ್ರಮ ವಹಿಸುವುದು | ಜನವರಿ–ಫೆಬ್ರವರಿ – 2020ರ ಮಾಹೆಗಳು |

## <u>ಯೋಜನೆಗಳನ್ನು ಯಶಸ್ವಿಗೊಳಿಸಲು ಅನುಸರಿಸಬೇಕಾದ ಕ್ರಮಗಳು:</u>

- **<u>ವಿವಿಧ ಸಮುದಾಯಗಳ ಸಭೆ ಕರೆಯುವುದು:</u>** ಹಿಂದುಳಿದ ವರ್ಗಗಳಿಗೆ ಸೇರಿದ ವಿವಿಧ ಸಮುದಾಯಗಳ ಮುಖಂಡರುಗಳ ಸಭೆ ಕರೆದು ನಿಗಮದ ಯೋಜನೆಗಳ ಅನುಷ್ಠಾನದ ಕುರಿತು ವಿಚಾರ ವಿನಿಮಯ ಮಾಡಿಕೊಂಡು ಅಗತ್ಯ ಕ್ರಮ ವಹಿಸುವುದು.

- **<u>ಸ್ವೀಕರಿಸಿದ ಅರ್ಜಿಗಳ ಪಟ್ಟಿ ತಯಾರಿಕೆ:</u>** ಆಯಾ ದಿನ ಸ್ವೀಕರಿಸಿದ ಅರ್ಜಿಗಳನ್ನು ಆಯಾ ದಿನವೇ ಯೋಜನಾವಾರು, ವಿಧಾನಸಭಾ ಕ್ಷೇತ್ರವಾರು ಕಡ್ಡಾಯವಾಗಿ ಗಣಕೀಕರಣಗೊಳಿಸುವುದು ಹಾಗೂ ಮರುದಿನ ಕೇಂದ್ರ ಕಛೇರಿಗೆ ವರದಿಸುವುದು. **<u>ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರದ ಒಂದು ವಾರದೊಳಗೆ ಎಲ್ಲಾ ಅರ್ಜಿಗಳ ಗಣಕೀಕರಣ ಕಾರ್ಯ ಪೂರ್ಣಗೊಳಿಸತಕ್ಕದ್ದು.</u>**

- **<u>ಸಂವಾದ:</u>** ನಿಗಮದ ಯೋಜನೆಗಳ ಬಗ್ಗೆ ಅರಿವು ಹಾಗೂ ಅನುಷ್ಠಾನದಲ್ಲಿನ ನ್ಯೂನ್ಯತೆ ಮತ್ತು ಕೊರತೆಗಳನ್ನು ತಿಳಿಯಲು ಜಿಲ್ಲಾ/ತಾಲ್ಲೂಕು/ಗ್ರಾಮ ಮಟ್ಟದಲ್ಲಿ **"ಸಂವಾದ"** ಕಾರ್ಯಕ್ರಮಗಳನ್ನು ಮತ್ತು ಕುಂದುಕೊರತೆ ನಿವಾರಣಾ ಕಾರ್ಯಕ್ರಮಗಳನ್ನು ಪ್ರತಿ ತಿಂಗಳು ಕಡ್ಡಾಯವಾಗಿ ಹಮ್ಮಿಕೊಳ್ಳುವುದು ಹಾಗೂ ನಿಗಮಕ್ಕೆ ವರದಿ ಮಾಡುವುದು.

- **<u>ಸಾಲ ವಿತರಣಾ ಪೂರ್ವ ಸಮಾಲೋಚನೆ</u>**: ಸಾಲ ಪಡೆಯಲು ಪೂರ್ಣ ಮಾಹಿತಿಯನ್ನು ಫಲಾನುಭವಿಗಳಿಗೆ ನೀಡಲು, ಸಾಲ ಮತ್ತು ಸಬ್ಸಿಡಿಯ ಮಹತ್ವವನ್ನು ತಿಳಿಸಲು, ಸಾಲ ಸದುಪಯೋಗದ ಬಗ್ಗೆ ತಿಳಿಸಲು, ಅವರ ಉತ್ಪನ್ನಕ್ಕೆ ಮಾರುಕಟ್ಟೆ ವ್ಯವಸ್ಥೆಯನ್ನು ತಿಳಿಸಲು, ಕಡ್ಡಾಯವಾಗಿ ಸಾಲ ವಿತರಣಾ ಪೂರ್ವ ಸಮಾಲೋಚನೆಯನ್ನು ನಿರಂತರವಾಗಿ ಹಮ್ಮಿಕೊಳ್ಳುವುದು.

- **<u>ಸಾಲ ವಿತರಣೋತ್ತರ ಪರ್ಯಾಲೋಚನೆ</u>**: ಸಾಲ ದುರುಪಯೋಗವಾಗುವುದನ್ನು ತಡೆಗಟ್ಟಲು ಯೋಜನೆಯ ಅನುಷ್ಠಾನ ಮತ್ತು ಘಟಕ ಸ್ಥಾಪನೆಯ ಬಗ್ಗೆ ನ್ಯೂನ್ಯತೆ ಮತ್ತು ಕೊರತೆಗಳ ಬಗ್ಗೆ ತಿಳಿಯಲು ಸಾಲ ಪಡೆದ ಫಲಾನುಭವಿಗಳೊಂದಿಗೆ ಪರ್ಯಾಲೋಚನಾ ಸಭೆಗಳನ್ನು ನಡೆಸುವುದು ಮತ್ತು ಘಟಕಗಳನ್ನು ತಪಾಸಿಸಿ ಸಾಲ ಮರುಪಾವತಿ ಮಾಡುವ ಬಗ್ಗೆ ಸೂಕ್ತ ತಿಳುವಳಿಕೆಯನ್ನು ಫಲಾನುಭವಿಗಳಿಗೆ ನೀಡುವುದು.

- **<u>ಸಂಯೋಜನೆ:</u>** ಗಂಗಾ ಕಲ್ಯಾಣ ನೀರಾವರಿ ಯೋಜನೆಯಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳಿಗೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆಗಳಲ್ಲಿ ದೊರೆಯುವ ಸೌಲಭ್ಯಗಳ ಮಾಹಿತಿಯನ್ನು ಒದಗಿಸಲು ಮಂಥನ ಕಾರ್ಯಕ್ರಮವನ್ನು ಕಡ್ಡಾಯವಾಗಿ ಏರ್ಪಡಿಸುವುದು.

- **ಘಟಕಗಳ ತಪಾಸಣೆ:** ನಿಗಮದಿಂದ ಸೌಲಭ್ಯ ಪಡೆದ ಫಲಾನುಭವಿಗಳು ಸಾಲದ ಮೊತ್ತದಿಂದ ಉತ್ಪನ್ನವಾದ ಘಟಕಗಳನ್ನು ಜಿಲ್ಲಾ ವ್ಯವಸ್ಥಾಪಕರು, ಕಡ್ಡಾಯವಾಗಿ ತಪಾಸಣೆ ಮಾಡುವುದು. ತಪಾಸಣೆ ಮಾಡಿದ ವರದಿಯನ್ನು ದಿನಚರಿಯಲ್ಲಿ ದಾಖಲಿಸುವುದು.

## ಸಾಲ ವಸೂಲಾತಿ ಕಾರ್ಯಕ್ರಮ:

- ದಿನಾಂಕ:13/05/2013ರವರೆಗೆ ಸಾಲ ಪಡೆದು ವಸೂಲಾತಿಗೆ ಬಾಕಿ ಇರುವ ಅಸಲು ಮತ್ತು ಬಡ್ಡಿಯನ್ನು ಮನ್ನಾ ಮಾಡಲಾಗಿರುತ್ತದೆ. ಇವುಗಳನ್ನು ಹೊರತುಪಡಿಸಿ ಉಳಿದ ಖಾತೆಗಳಿಂದ ನಿಗಧಿಪಡಿಸಿದ ಕಂತುಗಳನ್ವಯ ಸಾಲ ವಸೂಲಾತಿ ಮಾಡಲು ಕಡ್ಡಾಯವಾಗಿ ಕ್ರಮಕೈಗೊಳ್ಳಬೇಕು.

- ನಿಗಮವು ಜಿಲ್ಲಾ ಕಛೇರಿಗೆ ಸರಬರಾಜು ಮಾಡುವ ಕಂಪ್ಯೂಟರ್‌ಗಳನ್ನು ಇಲ್ಲವೇ ಜಿಲ್ಲಾ ಪಂಚಾಯತ್ ಒದಗಿಸಿರುವ ಕಂಪ್ಯೂಟರ್‌ಗಳನ್ನು ಉಪಯೋಗಿಸಿ, ಸಾಲದ ಖಾತೆಗಳನ್ನು ಕಂಪ್ಯೂಟರೀಕರಣ ಮಾಡುವುದು. ಆಗಿಂದಾಗ್ಗೆ ಪಡೆದ ಮರುಪಾವತಿ ಮೊತ್ತವನ್ನು ಗಣಕೀಕೃತಗೊಳಿಸಿ ಫಲಾನುಭವಿವಾರು/ಯೋಜನಾವಾರು ಡಿ.ಸಿ.ಬಿ.ಯನ್ನು ತಯಾರಿಸಿ ಬಾಕಿ ಮೊತ್ತಕ್ಕೆ ನೋಟಿಸ್ ಜಾರಿ ಮಾಡುವುದು. ಒಂದೂ ಕಂತು ಕಟ್ಟದೇ ಇರುವಂತಹ ಫಲಾನುಭವಿ/ಎಸ್.ಹೆಚ್.ಜಿ.ಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಖುದ್ದಾಗಿ ಭೇಟಿ ಮಾಡಿ ಸಾಲ ವಸೂಲಾತಿಗೆ ಕ್ರಮ ವಹಿಸುವುದು.

- ಒಂದೆರಡು ನೋಟೀಸ್‌ಗಳಿಗೆ ಫಲಾನುಭವಿಗಳು ಪ್ರತಿಕ್ರಿಯಿಸದಿದ್ದರೆ, ಅಂತಿಮ ನೋಟೀಸ್‌ನ್ನು ಜಾರಿ ಮಾಡುವುದು ಮತ್ತು ಸ್ಥಳ, ದಿನಾಂಕ ಮತ್ತು ವೇಳೆಯನ್ನು ನಿಗದಿಪಡಿಸಿ, ಸಂವಾದ ಕಾರ್ಯಕ್ರಮವನ್ನು ಸಂಘಟಿಸಿ, ಸಾಲ ವಸೂಲಾತಿಗೆ ಫಲಾನುಭವಿಗಳ ಮನವೊಲಿಸಲು ಸಂಘಟಿತ ಕ್ರಮವಹಿಸುವುದು ಹಾಗೂ ನಿಗಮದ ಕರ್ತೃತ್ವ ಕ್ರಮಗಳನ್ನು ಫಲಾನುಭವಿಗಳಿಗೆ ತಿಳುವಳಿಕೆ ಮೂಡಿಸುವುದು.

- ಫಲಾನುಭವಿಗಳ ದೂರವಾಣಿ ಸಂಖ್ಯೆ ಸಂಗ್ರಹಿಸಿ, ಸಾಲದ ಖಾತಾ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಸಾಲ ಮರುಪಾವತಿಗೆ ಕರೆ ಮಾಡಿ ಮಾಡಿ ಮರುಪಾವತಿಗೆ ಕ್ರಮ ವಹಿಸುವುದು.

- ಸಾಲ ಮರುಪಾವತಿ ತೀವ್ರಗೊಳಿಸಲು ಫಲಾನುಭವಿಯು ಗ್ರಾಮದಿಂದ ಜಿಲ್ಲಾ ಕಛೇರಿಗೆ ಬಂದು ಪಾವತಿಸುವಲ್ಲಿ ಅನಾನುಕೂಲವಾಗಿ ಮರುಪಾವತಿ ಮಾಡಲು ಆಸಕ್ತಿ ವಹಿಸದೆ ಇರಬಹುದು. ಆದ್ದರಿಂದ, ಈಗಾಗಲೇ ತಿಳಿಸಿರುವಂತೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಸಿಬ್ಬಂದಿ ಒಬ್ಬರನ್ನು ನೇಮಿಸಿ ಸ್ಥಳವನ್ನು ನಿಗದಿಪಡಿಸಿಕೊಂಡು ಮರುಪಾವತಿ ಸಂಗ್ರಹಿಸುವುದು.

- **ಸಾಲ ವಸೂಲಾತಿ ಆಂಧೋಲನ ಕಾರ್ಯ:** ನಿರಂತರವಾಗಿ ಮಾಡುವ ಸಾಲ ವಸೂಲಾತಿ ಕಾರ್ಯದ ಜೊತೆಗೆ ಪ್ರತಿ ತ್ರೈ ಮಾಸಿಕಕ್ಕೆ ಒಮ್ಮೆ 10 ದಿನಗಳ ಕಾಲ ಸಾಲ ವಸೂಲಾತಿ ಆಂಧೋಲನ ಹಮ್ಮಿಕೊಳ್ಳುವುದು. ಈ ಬಗ್ಗೆ ಎಲ್ಲಾ ಫಲಾನುಭವಿಗಳಿಗೆ ಪತ್ರ ಮುಖೇನ ತಿಳಿಸಬೇಕು. ವಸೂಲಾತಿ ಆಂಧೋಲನ ಕಾರ್ಯದಲ್ಲಿ ಭಾಗವಹಿಸುವ ಸಿಬ್ಬಂದಿಗಳಿಗೆ ಜಿಲ್ಲಾ ಕಛೇರಿಯಲ್ಲಿರುವ ವಾಹನಗಳನ್ನು ಒದಗಿಸಬೇಕು. ಈ ವಾಹನದ ಮೇಲೆ **'ಸಾಲ ವಸೂಲಾತಿ ಆಂಧೋಲನಾ ವಾಹನ'** ಎಂದು ಸೂಚನಾ ಫಲಕ ಅಳಡಿಸಬೇಕು.

**ವ್ಯವಸ್ಥಾಪಕ ನಿರ್ದೇಶಕರು.**